ಸಂಪಾದಕರು :
ಎಂ.ಎಸ್. ವಿಕಾಸ್

ಬುಧವಾರ, ಏಪ್ರಿಲ್ 17, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 336 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999




## ಇಂದು ನಾಮಪತ್ರ ಸಲ್ಲಿಕೆ

ಬಲ ನಿಮ್ಮದು
ಪ್ರಯತ್ನ ನನ್ನದು
ಫಲ ಎಲ್ಲರದು
- ವಿನಯ್ ಕುಮಾರ್ ಜಿ.ಬಿ

ಆತ್ಮೀಯ ಮತದಾರ ಬಂಧುಗಳು, ಹಿತೈಷಿಗಳು, ಬೆಂಬಲಿಗರು ಹಾಗೂ ಅಭಿಮಾನಿಗಳಲ್ಲಿ ವಿನಂತಿಸುವುದೇನೆಂದರೆ,
**ದಿನಾಂಕ:07-05-2024**ರಂದು ನಡೆಯಲಿರುವ
**ಲೋಕಸಭಾ ಚುನಾವಣೆ**ಯಲ್ಲಿ
**ದಾವಣಗೆರೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ**ಯಾಗಿ
ವಿನಯವಂತ, ಸ್ವಾಭಿಮಾನಿ ಹೋರಾಟಗಾರ,
ಯುವಕರ ಕಣ್ಮಣಿ, ಯುವ ಚೇತನ,
ಯುವಜನರ ಆಶಾಕಿರಣ

## ವಿನಯ್ ಕುಮಾರ್ ಜಿ.ಬಿ

ಅವರು ಸ್ಪರ್ಧಿಸುತ್ತಿದ್ದು,
**ದಿನಾಂಕ 17-04-2024** ರಂದು
**ಬುಧವಾರ ಬೆಳಿಗ್ಗೆ 9.30 ಗಂಟೆಗೆ**
ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಖಡಕ್ ಷಾ ವಲಿ ಮಖಾನ್ ಭೇಟಿ ನೀಡಿ, ನಂತರ ಪಿ.ಬಿ. ರಸ್ತೆಯ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ನಂತರ ಪಿ.ಬಿ.ರಸ್ತೆಯ ಬೀರಲಿಂಗೇಶ್ವರ ಮೈದಾನದಿಂದ
**ಬೃಹತ್ ಮೆರವಣಿಗೆ ಮೂಲಕ**
ಜಿಲ್ಲಾಧಿಕಾರಿಗಳವರ ಕಚೇರಿಗೆ ತೆರಳಿ
**ನಾಮಪತ್ರ ಸಲ್ಲಿಸಲಿದ್ದಾರೆ.**



**ಹೆಚ್ಚಿನ ಸಂಖ್ಯೆಯಲ್ಲಿ ಬನ್ನಿ,
ಭಾಗವಹಿಸಿ, ಯಶಸ್ವಿಗೊಳಿಸಿ,
ಯುವ ನಾಯಕನಿಗೆ ಶಕ್ತಿ ತುಂಬುವಂತೆ
ಸರ್ವರಲ್ಲಿ ಕಳಕಳಿಯಿಂದ ಮನವಿ.**

**ಪ್ರಕಟಣೆ: ವಿನಯ್ ಕುಮಾರ್ ಜಿ.ಬಿ. ಅಭಿಮಾನಿ ಬಳಗ**

# ಕಾಂಗ್ರೆಸ್ ಅಭ್ಯರ್ಥಿಯಿಂದ ನಾಳೆ ನಾಮಪತ್ರ ಸಲ್ಲಿಕೆ: ಶಕ್ತಿ ಪ್ರದರ್ಶಿಸಲು ಹರಿಹರ ತಾ. ಕಾಂಗ್ರೆಸ್ ನಿರ್ಧಾರ

ಹರಿಹರ, ಏ.16- ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ನಾಳೆ ಗುರುವಾರ ನಾಮಪತ್ರ ಸಲ್ಲಿಸಲಿದ್ದು, ಈ ಕಾರ್ಯಕ್ರಮದಲ್ಲಿ ಹರಿಹರ ತಾಲ್ಲೂಕಿನಿಂದ ಸಹಸ್ರ ಸಂಖ್ಯೆಯಲ್ಲಿ ಜನ ಸೇರಬೇಕು ಎಂದು ಮಾಜಿ ಶಾಸಕ ಎಸ್.ರಾಮಪ್ಪ ಹಾಗೂ ಪಕ್ಷದ ಮುಖಂಡ ನಂದಿಗಾವಿ ಶ್ರೀನಿವಾಸ್ ಜಂಟಿಯಾಗಿ ಹೇಳಿದರು.



ನಗರದ ಎಚ್.ಕೆ. ವೀರಪ್ಪ ಕಲ್ಯಾಣ ಮಂಟಪದಲ್ಲಿ ಇಂದು ಹಮ್ಮಿಕೊಂಡಿದ್ದ ಕಾಂಗ್ರೆಸ್ ಪಕ್ಷದ ಮುಖಂಡರ, ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

ನಾಮಪತ್ರ ಸಲ್ಲಿಸುವ ವೇಳೆ ಅಧಿಕ ಸಂಖ್ಯೆಯಲ್ಲಿ ಜನ ಸೇರಿಸಲು ಐದು ಜನ ಪ್ರಮುಖರಿಗೆ ಜವಾಬ್ದಾರಿ ನೀಡಲಾಗಿದೆ. ಆದ್ದರಿಂದ ಅವರ ಮಾರ್ಗದರ್ಶನದಲ್ಲಿ ಪಕ್ಷದ ಮುಖಂಡರೆಲ್ಲರೂ ಸಮ್ಮತಿಸೋಣ ಎಂದು ಹೇಳಿದರು.

ಜಿಲ್ಲಾ ಕೇಂದ್ರ ಹತ್ತಿರವಿರುವ ಕಾರಣ ಬಸ್ ವ್ಯವಸ್ಥೆ ಮಾಡಿಲ್ಲ. ಆದ್ದರಿಂದ ಬೂತ್ ಮಟ್ಟದಲ್ಲಿ ಲಘು ವಾಹನ ವ್ಯವಸ್ಥೆ ಇದ್ದು, ಪ್ರತಿ ಬೂತ್‌ನಿಂದ 100ಕ್ಕೂ ಹೆಚ್ಚಿನ ಜನ, ಪಕ್ಕೀರಸ್ವಾಮಿ ಮಠದ ಬಳಿ ಸೇರಿದರೆ ಅಲ್ಲಿಂದ ನಾಮಪತ್ರ ಸಲ್ಲಿಸುವ ಸ್ಥಳಕ್ಕೆ ಹೋಗಬಹುದು ಎಂದು ತಿಳಿಸಿದರು.

ಪಕ್ಷದ ಮುಖಂಡ ಎಂ. ನಾಗೇಂದ್ರಪ್ಪ ಮಾತನಾಡಿ, ಗ್ರಾ.ಪಂ, ತಾ.ಪಂ ಹಾಗೂ ಜಿ.ಪಂ ಸದಸ್ಯರೆಲ್ಲರೂ ನಮ್ಮ ಶಕ್ತಿ ಪ್ರದರ್ಶನ ಮಾಡಬೇಕಿದೆ. ಈ ನಿಟ್ಟಿನಲ್ಲಿ ನಾನೂ ಸಹ ಬೆಳ್ಳೂಡಿ ಪಂಚಾಯಿತಿ ವ್ಯಾಪ್ತಿಯಲ್ಲಿನ ಹಳ್ಳಿಗರು ಬರಲು ಸೂಕ್ತ ವ್ಯವಸ್ಥೆ ಮಾಡುತ್ತೇನೆ ಎಂದು ಹೇಳಿದರು.

ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ನಿಖಿಲ್ ಕೊಂಡಜ್ಜಿ ಮಾತನಾಡಿ, ಪ್ರತಿ ಗ್ರಾಮದಿಂದಲೂ ಜನ ಬರುವಂತೆ ಕಾರ್ಯಕರ್ತರು ಗಮನ ವಹಿಸಬೇಕು. ಬಿಜೆಪಿ ಪಕ್ಷಕ್ಕೆ ಸೋಲಿನ ಭಯ ಕಾಡುವಂತೆ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಿ ನಾಮಪತ್ರ ಸಲ್ಲಿಸಬೇಕು ಎಂದರು.

ಮಾಜಿ ತಾ.ಪಂ ಸದಸ್ಯರಾದ ಗುತ್ತೂರಿನ ಜಿ.ಬಿ ಹಾಲೇಶ್‌ಗೌಡ್ರು ಮಾತನಾಡಿ, ತಾಲ್ಲೂಕಿನಿಂದ ಕನಿಷ್ಠ 25 ಸಾವಿರ ಜನರನ್ನು ಸೇರಿಸೋಣ. ಹೆಚ್ಚು ಮತಗಳಿಂದ ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸಿದರೆ ತಾಲ್ಲೂಕು ಅಭಿವೃದ್ಧಿಗೊಳಿಸುವುದಕ್ಕೆ ಸಹಾಯಕವಾಗಲಿದೆ ಎಂದು ಹೇಳಿದರು.

ಈ ವೇಳೆ ನಗರಸಭೆ ಸದಸ್ಯ ಶಂಕರ್ ಖಟಾವ್ಕರ್, ಕೆ.ಜಿ. ಸಿದ್ದೇಶ್, ಎ.ಬಿ. ವಿಜಯಕುಮಾರ್, ಬಾಬುಲಾಲ್, ಅಬ್ದುಲ್ ಅಲಿಂ, ನಾಗರತ್ನ, ಸುಮಿತ್ರಾ, ಜಿ.ಪಂ. ಮಾಜಿ ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ, ಸಿರಿಗೆರೆ ರಾಜಣ್ಣ, ಕೆ.ಜಡಿಯಪ್ಪ, ಸುರೇಶ್ ಹಾದಿಮನಿ, ಟಿ.ಜೆ ಮುರುಗೇಶಪ್ಪ, ಕುಂಬಳೂರು ವೀರೂಪಾಕ್ಷಪ್ಪ, ಜಿ.ಪಂ ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ, ಮಾಜಿ ನಗರಸಭೆ ಅಧ್ಯಕ್ಷ ಕೃಷ್ಣಸಾ ಭೂತೆ, ವೈ.ಎನ್. ಮಹೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಬಿ. ಹನುಮಂತಪ್ಪ, ಕೆಪಿಸಿಸಿ ಸದಸ್ಯ ಬಿ. ರೇವಣಸಿದ್ದಪ್ಪ, ಸಿ.ಎನ್. ಹುಲುಗೇಶ್, ಅಮರಾವತಿ ರೇವಣಸಿದ್ದಪ್ಪ, ವಕೀಲ ಸಿದ್ದನಗೌಡ, ಯಲವಟ್ಟಿ ಮಲ್ಲಿಕಾರ್ಜುನಪ್ಪ, ಎಂ.ಬಿ. ಅಭಿದಾಲಿ, ಮಂಜುನಾಥ್ ಪಾಟೀಲ್ ಕುಮಾರನಹಳ್ಳಿ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಕಾರ್ಮಿಕ ಮುಖಂಡ ಎಚ್.ಕೆ. ಕೊಟ್ರಪ್ಪ, ನರೇಂದ್ರ ಬೆಳ್ಳೂಡಿ, ಗೋವಿನಾಳ ರಾಜಣ್ಣ, ಅಶೋಕ ಮಾಸ್ಟರ್, ಬಸವರಾಜ್ ಹಲಸಬಾಳು, ಏಜಾಜ್ ಅಹ್ಮದ್, ಮಲೇಬೆನ್ನೂರು ಕೆ.ಪಿ. ಗಂಗಾಧರ್, ಸಂತೋಷ ನೋಟದರ್, ಕೆ.ಬಿ. ರಾಜಶೇಖರ್, ಸಂತೋಷ್ ದೊಡ್ಡಮನೆ, ಮುನಾಫ್, ಅರ್ಜುನ್ ಪವರ್, ವಿಜಯಕುಮಾರ್, ರೆಹಮಾನ್ ಸಾಬ್, ನಾಗೇಂದ್ರಪ್ಪ ರಾಜನಹಳ್ಳಿ, ಹನುಮಂತಪ್ಪ ಕತ್ವಾಲ್, ಶಶಿರೆಡ್ಡಿ ಬಿಳಸನೂರು, ವೈ. ರಘುಪತಿ, ಮಧುಸೂದನ್, ಭರತ್, ರಾಘವೇಂದ್ರ ಕೊಂಡಜ್ಜಿ, ಆನಂದ್ ವಕೀಲ, ತಿಪ್ಪೇಸ್ವಾಮಿ, ಗೌಡ್ರು ಮಂಜುನಾಥ್ ಜೋಸೆಫ್ ದಿವಾಕರ್, ಇಮ್ರಾಜ್, ಪ್ರಭು ಕಕ್ಕರಗೊಳ್ಳ, ನಾಗರಾಜ್ ಕುಡುಪಲಿ ರಾಣೇಬೆನ್ನೂರು, ಪ್ರವೀಣ್, ನಜೀರ್ ಹುಸೇನ್, ಅಶೋಕ್ ಭೂತೆ, ಸಾಧಿಕ್ ಸಾಬ್ ಮಲೇಬೆನ್ನೂರು ಇದ್ದರು.

# ಇಂದು ವಿನಯ್ ಕುಮಾರ್ ನಾಮಪತ್ರ ಸಲ್ಲಿಕೆ

ದಾವಣಗೆರೆ, ಏ.16- ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ನಾಳೆ ದಿನಾಂಕ 17ರ ಬುಧವಾರ ನಾಮಪತ್ರ ಸಲ್ಲಿಸುವುದಾಗಿ ಜಿ.ಬಿ.ವಿನಯ್ ಕುಮಾರ್ ತಿಳಿಸಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಡಿದ್ದು ದಿನಾಂಕ 18ರಂದು ನಾಮಪತ್ರ ಸಲ್ಲಿಸಲು ತೀರ್ಮಾನಿಸಲಾಗಿತ್ತು. ಆದರೆ, ಅಂದು ಕಾಂಗ್ರೆಸ್ ರ್ಯಾಲಿ ಇದ್ದು, ಮೆರವಣಿಗೆಯಲ್ಲಿ ಗೊಂದಲ ಸೃಷ್ಟಿಯಾಗಬಾರದೆಂದು 17ರಂದು ರ್ಯಾಲಿ ನಡೆಸಲಾಗುತ್ತದೆ ಎಂದು ಹೇಳಿದರು.

ಬುಧವಾರ ಬೆಳಿಗ್ಗೆ 10ಕ್ಕೆ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ದರ್ಗಾಕ್ಕೆ ತೆರಳಿ ಹೊದಿಕೆ ಸಲ್ಲಿಸಿ, ನಂತರ ಶ್ರೀ ಬೀರಲಿಂಗೇಶ್ವರ ದೇವಸ್ಥಾನ ಆವರಣದಲ್ಲಿ ಬಹಿರಂಗ ಸಭೆ ನಡೆಸಿ ಪಿ.ಬಿ.ರಸ್ತೆಯ ಮೂಲಕ ಜಿಲ್ಲಾಧಿಕಾರಿಗಳ ಕಛೇರಿವರೆಗೆ ಬೃಹತ್ ರ್ಯಾಲಿಯೊಂದಿಗೆ ತೆರಳಲಾಗುವುದು.

ಮಾರ್ಗ ಮಧ್ಯೆ ಬರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ, ದೇವರಾಜ ಅರಸು ಪ್ರತಿಮೆ ಸೇರಿದಂತೆ ಇತರೆ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಲಾಗುವುದು ಎಂದು ವಿನಯ್ ಕುಮಾರ್ ವಿವರಿಸಿದರು.

ಯಾವ ಕಾರಣಕ್ಕೂ ನಾನು ನಾಮಪತ್ರ ಹಿಂಪಡೆಯುವುದಿಲ್ಲ ಎಂದು ಸ್ಪಷ್ಟಪಡಿಸಿದ ಅವರು, ನಾನು ಯಾರನ್ನೂ ಸೋಲಿಸಲು ರಾಜಕೀಯಕ್ಕೆ ಬಂದಿಲ್ಲ. ಹೊಸ ಮುಖದ ಅವಶ್ಯಕತೆ ಜನರಿಗೆ ಇದೆ. ಕೆಲಸ ಮಾಡಲು ವಿನಯ ಪಡೆ ಸಿದ್ದವಾಗಿದೆ. 1946 ಬೂತ್‌ಗಳಲ್ಲಿ ಸ್ವಯಂ ಪ್ರೇರಿತರಾಗಿ ಕೆಲಸ ಮಾಡಲು ಮುಂದೆ ಬಂದಿದ್ದಾರೆ. ಒಟ್ಟಾರೆ ದಾವಣಗೆರೆ ಲೋಕಸಭಾ ಚುನಾವಣೆಯಲ್ಲಿ ಅಕ್ಕೋರ್ ನೋಟು, ವಿನಯ್ ಕುಮಾರ್ ಗೆ ಓಟು ಎನ್ನುವ ಪರಿಸ್ಥಿತಿ ನಿರ್ಮಾಣ ಆಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಆಮ್ ಆದ್ಮಿ ಪಕ್ಷದ ಚಂದ್ರು ಬಸವಂತ್, ಹಾಲಸ್ವಾಮಿ, ರಾಜಶೇಖರ, ಬಸವರಾಜ್, ಅನಂತ ರಾಜ್ ಹೊಳಲು, ಪುರಂದರ ಲೋಕಿಕೆರೆ ಇತರರು ಇದ್ದರು.

# ಯುಪಿಎಸ್‌ಸಿ ಪರೀಕ್ಷೆ: ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ವಿದ್ಯಾರ್ಥಿಗಳು ಉತ್ತೀರ್ಣ

ದಾವಣಗೆರೆ, ಏ. 16- ಕೇಂದ್ರ ಲೋಕಸೇವಾ ಆಯೋಗ ನಡೆಸಿದ (ಯುಪಿಎಸ್‌ಸಿ) 2023 ನೇ ಸಾಲಿನ ನಾಗರಿಕರ ಸೇವೆಗಳ ಪರೀಕ್ಷೆಯಲ್ಲಿ ಇನ್‌ಸೈಟ್ಸ್ ಐಎಎಸ್‌ನಲ್ಲಿ ತರಬೇತಿ ಪಡೆದ 150 ಕ್ಕೂ ಹೆಚ್ಚು ಅಭ್ಯರ್ಥಿಗಳು ಯಶಸ್ವಿಯಾಗಿದ್ದಾರೆ.

ಕರ್ನಾಟಕದಿಂದ ಈ ಬಾರಿ 28 ಅಭ್ಯರ್ಥಿಗಳು ಉತ್ತೀರ್ಣರಾಗಿದ್ದು, ಈ ಪೈಕಿ ಉತ್ತಮ ರ್ಯಾಂಕಿಂಗ್ ಪಡೆದ 20 ಅಭ್ಯರ್ಥಿಗಳಿಗೆ ತರಬೇತಿ, ಮಾರ್ಗದರ್ಶನ ನೀಡಿರುವುದು ಬೆಂಗಳೂರಿನ ಇನ್‌ಸೈಟ್ಸ್ ಐಎಎಸ್ ಎಂದು ಸಂಸ್ಥೆಯ ಸಂಸ್ಥಾಪಕ ವಿನಯ್ ಕುಮಾರ್ ಜಿ.ಬಿ ಹರ್ಷ ವ್ಯಕ್ತಪಡಿಸಿದ್ದಾರೆ.

ಉತ್ತಮ ಶ್ರೇಯಾಂಕದೊಂದಿಗೆ ತೇರ್ಗಡೆಯಾದ ಈ ಅಭ್ಯರ್ಥಿಗಳಲ್ಲಿ ಹಲವರು ಇನ್‌ಸೈಟ್ಸ್ ಐಎಎಸ್‌ನ ನೇರವಾದ ಬೋಧನಾ ತರಬೇತಿಗೆ (ಒಜಿಪಿ ಕೋರ್ ಬ್ಯಾಚ್) ಹಾಜರಾಗಿದ್ದರೆ, ಬಹಳಷ್ಟು ಅಭ್ಯರ್ಥಿಗಳು ಪೂರ್ವಭಾವಿ ಹಾಗೂ ಮುಖ್ಯ ಪರೀಕ್ಷೆ ಸರಣಿ ಮತ್ತು ಅಣಕು ಸಂದರ್ಶನಗಳಂತಹ ಹಲವಾರು ಕಾರ್ಯಕ್ರಮಗಳ ವಿದ್ಯಾರ್ಥಿಗಳಾಗಿದ್ದಾರೆ ಎಂದು ಅವರು ವಿವರಿಸಿದ್ದಾರೆ.

## ಜನಹಿತ ಪಕ್ಷದ ಅಭ್ಯರ್ಥಿಯಾಗಿ ದೊಡ್ಡೇಶ್ ಸ್ಪರ್ಧೆ

ದಾವಣಗೆರೆ, ಏ.16- ಜನತಾ ಪರಿವಾರದ ಧ್ಯೇಯ ತತ್ವಗಳನ್ನು ಅನುಸರಿಸುವವನಾಗಿ ಜನತಾ ಪರಿವಾರದ ನೂತನ ವೇದಿಕೆ ಐಡಿಯಾ (ಇಂಡಿಯನ್ ಡೆಮಾಕ್ರಸಿ ಎಂಪವರ್‌ಮೆಂಟ್ ಅಲೆಯನ್ಸ್‌ನ ಅಡಿಯಲ್ಲಿ ಕರ್ನಾಟಕದ ಪ್ರಾದೇಶಿಕ ಪಕ್ಷ ಜನಹಿತ ಪಕ್ಷದ ಅಭ್ಯರ್ಥಿಯಾಗಿ ದಾವಣಗೆರೆ ಕ್ಷೇತ್ರದಿಂದ ಸ್ಪರ್ಧೆ ಮಾಡುತ್ತಿರುವುದಾಗಿ ಹೆಚ್.ಎಸ್.ದೊಡ್ಡೇಶ್ ಹೇಳಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಟುಂಬ ರಾಜಕಾರಣದ ವಿರುದ್ಧವಾಗಿ ಹೋರಾಡಲು ಜನತಾ ಪರಿವಾರದ ಜನಹಿತ ಪಕ್ಷಕ್ಕೆ ಮಾತ್ರ ಸಾಧ್ಯ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕೆ.ವಿ.ಶಿವರಾಮ್, ರೆಹಮಾನ್ ಖಾನ್, ಪರಶುರಾಮ್, ಶಿವರುದ್ರಯ್ಯ ಸ್ವಾಮಿ ಇದ್ದರು.

## ಪಕ್ಷೇತರ ಅಭ್ಯರ್ಥಿಯಾಗಿ ಭಜರಂಗ ದಳ ಕಾರ್ಯಕರ್ತ ಪ್ರಸನ್ನ

ದಾವಣಗೆರೆ, ಏ.16- ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ಚನ್ನಗಿರಿ ತಾಲ್ಲೂಕಿನ ಬಜರಂಗ ದಳ ಕಾರ್ಯಕರ್ತ ಬಿ.ಆರ್. ಪ್ರಸನ್ನ ಕಣಕ್ಕಿಳಿಯಲಿದ್ದಾರೆ. ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರಸನ್ನ ಅವರು, ದಾವಣಗೆರೆ ಜಿಲ್ಲೆಗೆ ಐಟಿ ಕಂಪನಿ, ಏರ್‌ಪೋರ್ಟ್ ತರುವುದರ ಜತೆಗೆ ಸರಕಾರಿ ಶಾಲಾ-ಕಾಲೇಜು ಸುಧಾರಣೆ ಸೇರಿದಂತೆ ನಾನಾ ಜನಪರ ಕಾರ್ಯ ಕೈಗೊಳ್ಳುವ ಉದ್ದೇಶದಿಂದ ಪಕ್ಷೇತರ ಅಭ್ಯರ್ಥಿಯಾಗಿ ನಾಡಿದ್ದು ದಿನಾಂಕ 18ರಂದು ನಾಮಪತ್ರ ಸಲ್ಲಿಸುತ್ತಿರುವುದಾಗಿ ತಿಳಿಸಿದರು.





## ಹರಳಹಳ್ಳಿ : ನೂತನ ರಥಕ್ಕೆ ಕಳಸಾರೋಹಣ, ಇಂದು ರಥೋತ್ಸವ

ಮಲೇಬೆನ್ನೂರು, ಏ.16- ಸಮೀಪದ ಹರಳಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ರಥಕ್ಕೆ ಮಂಗಳವಾರ ಬೆಳಗ್ಗೆ ಕಣ್ವಕುಪ್ಪೆ ಗವಿಮಠದ ಶ್ರೀ ಡಾ. ನಾಲ್ವಡಿ ಶಾಂತಲಿಂಗ ಸ್ವಾಮೀಜಿ ಸಾನ್ನಿಧ್ಯದಲ್ಲಿ ಕಳಸಾರೋಹಣ ಸಂಭ್ರಮದಿಂದ ನಡೆಯಿತು. ರಾತ್ರಿ ಚಿಗರಿ ಉತ್ಸವ ಜರುಗಿತು.

**ಇಂದು ತೇರು** : ಗ್ರಾಮದ ಆರಾಧ್ಯ ದೈವ ಶ್ರೀ ಆಂಜನೇಯ ಸ್ವಾಮಿಯ ರಥೋತ್ಸವವು ಇಂದು ತಡ ರಾತ್ರಿ (ಗುರುವಾರ ಬೆಳಗಿನ ಜಾವ) ವೈಭವದೊಂದಿಗೆ ಜರುಗಲಿದೆ.

ರಥೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 8 ಗಂಟೆಗೆ ಗಜೋತ್ಸವ, ಗಂಡುಗತ್ತಿ ಹಾಯುವುದು. ಮಧ್ಯಾಹ್ನ 12.30ಕ್ಕೆ ಭಕ್ತರು ದೇವಸ್ಥಾನಕ್ಕೆ ಅಕ್ಕಿಪಡಿ ಹಾಕುವ ಸೇವಾ ಕಾರ್ಯಕ್ರಮ ನಡೆಯಲಿದೆ.

## ಹಲವು ಪ್ರಕರಣಗಳಲ್ಲಿ ಭಾಗಿ : ಶಿಕ್ಷಕ ಅಮಾನತು

ದಾವಣಗೆರೆ, ಏ. 16 - ಜಗಳೂರು ತಾಲ್ಲೂಕಿನ ಹನುಮಂತಾಪುರ ಗೊಲ್ಲರಹಟ್ಟಿ ಸರ್ಕಾರಿ ಉರ್ದು ಪ್ರಾಥಮಿಕ ಶಾಲೆ ಸಹ ಶಿಕ್ಷಕ ಆಂಜನೇಯ ನಾಯ್ಕ್ ಇವರನ್ನು ಅಮಾನತ್ತು ಮಾಡಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ವೆಂಕಟೇಶ್ ಎಂ.ವಿ ಆದೇಶಿಸಿದ್ದಾರೆ.

ಶಿಕ್ಷಕರಾಗಿದ್ದ ಇವರು ಜಾತಿ, ಜಾತಿಗಳ ಮಧ್ಯೆ ವೈಷಮ್ಯ ಮೂಡಿಸುವುದು, ಶಾಲೆಗೆ ಗೈರು ಹಾಜರಾಗುವುದು ಮತ್ತು ರಾಜಕೀಯ ಪಕ್ಷಗಳ ಜೊತೆ ಗುರುತಿಸಿಕೊಳ್ಳುವುದು ಹಾಗೂ ಬೇರೆ ಶಿಕ್ಷಕರ ಮೇಲೆ ಒತ್ತಡ ಹೇರುವುದು ಈ ಬಗ್ಗೆ ಇವರ ಮೇಲೆ ಸಾರ್ವಜನಿಕರು ದೂರು ನೀಡಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ ಬೇರೆ ತಾಲ್ಲೂಕುಗಳಿಗೆ ವರ್ಗಾವಣೆ ಮಾಡುವಂತೆ ದೂರು ಸಲ್ಲಿಕೆಯಾಗಿರುತ್ತವೆ. ಮತ್ತು ಈ ಶಿಕ್ಷಕರ ಮೇಲೆ ಜಗಳೂರು ಪೊಲೀಸ್ ಠಾಣೆಯಲ್ಲಿ ಮೂರು ಪ್ರತ್ಯೇಕ ಪ್ರಕರಣಗಳು ದಾಖಲಾಗಿರುತ್ತವೆ. ಇವರ ನಡತೆ ಕುರಿತಂತೆ ಪೊಲೀಸ್ ಅಧೀಕ್ಷಕರು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ವರದಿ ಸಲ್ಲಿಕೆಯಾಗಿರುತ್ತದೆ. ಇವರು ಕರ್ನಾಟಕ ನಾಗರಿಕ ಸೇವಾ ನಡತೆ ನಿಯಮಾವಳಿಗೆ ವಿರುದ್ದವಾಗಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಸೇವೆಯಿಂದ ಅಮಾನತ್ತು ಮಾಡಿ ಆದೇಶಿಸಲಾಗಿದೆ.

## ರಾಮನವಮಿ : ನಗರದಲ್ಲಿ ಇಂದು ಅಭಿಷೇಕ, ಪಾನಕ-ಕೋಸಂಬರಿ ವಿತರಣೆ



ಶ್ರೀ ರಾಮಮಂದಿರ ಸೇವಾ ಸಮಿತಿ ಸದಸ್ಯರು ಹಾಗೂ ದಾವಣಗೆರೆ ಯೋಗ ಬಂಧುಗಳು ಹಾಗೂ ಶ್ರೀ ರಾಮ ಭಕ್ತರ ಸಂಯುಕ್ತಾಶ್ರಯದಲ್ಲಿ ಶ್ರೀ ರಾಮನವಮಿ ಪ್ರಯುಕ್ತ ಶ್ರೀರಾಮ, ಲಕ್ಷ್ಮಣ, ಸೀತಾಮಾತೆ, ಆಂಜನೇಯ ಸ್ವಾಮಿ ಮೂರ್ತಿಗೆ ಅಭಿಷೇಕ ಕಾರ್ಯಕ್ರಮವನ್ನು ಇಂದು ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 7 ರಿಂದ 9ರವರೆಗೆ ಶ್ರೀ ರಾಮ ಭಕ್ತರಿಂದ ಉತ್ಸವ ಮೂರ್ತಿಗೆ ಕ್ಷೀರಾಭಿಷೇಕ, ಬೆಳಿಗ್ಗೆ 9 ರಿಂದ 11ರವರೆಗೆ ಶ್ರೀ ರಾಮ ತಾರಕ ಹೋಮ, ಬೆಳಿಗ್ಗೆ 11 ರಿಂದ 11.30ರವರೆಗೆ ಶ್ರೀರಾಮ ಮೂರ್ತಿಗೆ ತೊಟ್ಟಿಲು ಸೇವೆ ನೆರವೇರುವುದು.


ಬೆಳಿಗ್ಗೆ 6 ರಿಂದ ರಾತ್ರಿ 8ರವರೆಗೆ ಶ್ರೀ ರಾಮನವಮಿ ಮತ್ತು ಲೋಕಕಲ್ಯಾಣಕ್ಕಾಗಿ ಭಜನಾ ಗ್ರೂಪ್ ಸದಸ್ಯರಿಂದ ಶ್ರೀ ರಾಮಭಜನೆ ಕಾರ್ಯಕ್ರಮ ನಡೆಯಲಿದೆ. ಬೆಳಿಗ್ಗೆ 10 ರಿಂದ ಮಧ್ಯಾಹ್ನ 3ರವರೆಗೆ ಪಾನಕ, ಕೋಸಂಬರಿ ಪ್ರಸಾದ ವಿತರಿಸಲಾಗುವುದು. ರಾತ್ರಿ 8 ರಿಂದ ಪ್ರಭು ಶ್ರೀರಾಮನಿಗೆ ಪಲ್ಲಕ್ಕಿ ಉತ್ಸವ ಏರ್ಪಡಿಸಲಾಗಿದೆ.



## ಕುಣೆಬೆಳಕೆರೆ: ಸಂಭ್ರಮದ ರಥೋತ್ಸವ

ಮಲೇಬೆನ್ನೂರು, ಏ.16- ಕುಣೆಬೆಳಕೆರೆ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ರಥೋತ್ಸವವು ಮಂಗಳವಾರ ಬೆಳಗ್ಗೆ ಗ್ರಾಮಸ್ಥರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು.

## ನಗರದ ಸಾಯಿಬಾಬಾ ಮಂದಿರದಲ್ಲಿ ರಾಮನವಮಿ ಕೋಸುಂಬರಿ ಪಾನಕ ವಿತರಣೆ



ಶ್ರೀ ರಾಮನವಮಿ ಪ್ರಯುಕ್ತ ಎಂ.ಸಿ.ಸಿ. 'ಎ' ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಇಂದು ಬೆಳಿಗ್ಗೆ 8 ಗಂಟೆಗೆ ಶ್ರೀ ರಾಮನಿಗೆ ವಿಶೇಷ, ಅಲಂಕಾರ, ಪೂಜೆ, ಮಂಗಳಾರತಿ ನಂತರ ಪ್ರಸಾದ (ಕೋಸುಂಬರಿ ಪಾನಕ) ವಿತರಿಸಲಾಗುವುದು ಎಂದು ಶ್ರೀ ಸಾಯಿ ಟ್ರಸ್ಟ್ ಕಾರ್ಯದರ್ಶಿ ಎಂ. ಶಿವಪ್ಪ ತಿಳಿಸಿದ್ದಾರೆ.

## ಮೂರನೇ ದಿನ ಷೇರುಪೇಟೆ ಕುಸಿತ

ಮುಂಬೈ, ಏ. 16 – ಷೇರು ಮಾರುಕಟ್ಟೆ ಮಂಗಳವಾರ ಸಹ ಕುಸಿತ ಕಂಡಿದೆ. ಐ.ಟಿ. ಷೇರುಗಳು ದೊಡ್ಡ ಮಟ್ಟದಲ್ಲಿ ಮಾರಾಟಗೊಂಡಿವೆ. ಮಧ್ಯಪ್ರಾಚ್ಯದ ಬಿಕ್ಕಟ್ಟು ಷೇರುಪೇಟೆಯ ಮೇಲೆ ಪರಿಣಾಮ ಬೀರುತ್ತಿದೆ. ಸತತ ಮೂರು ದಿನಗಳಿಂದ ಷೇರುಪೇಟೆಯಲ್ಲಿ ಕುಸಿತ ಕಂಡು ಬರುತ್ತಿದೆ.

ಬಿ.ಎಸ್.ಇ. ಸೂಚ್ಯಂಕ 456.10 ಅಂಕಗಳ ಕುಸಿತ ಕಂಡು 72,943.68ಕ್ಕೆ ತಲುಪಿದೆ. ಎನ್.ಎಸ್.ಇ. ಸೂಚ್ಯಂಕ 124.60 ಅಂಕಗಳ ಇಳಿಕೆಯಾಗಿ 22,147.90ಕ್ಕೆ ತಲುಪಿದೆ.

## ಎಲೆಬೇತೂರು : ನಾಳೆ ಶ್ರೀ ಸವಗದ್ದಿಗೆ ಸಂಗಮೇಶ್ವರ ಸ್ವಾಮಿಯ ರಥೋತ್ಸವ

ದಾವಣಗೆರೆ, ಏ. 16- ತಾಲ್ಲೂಕಿನ ಎಲೆಬೇತೂರು ಗ್ರಾಮದಲ್ಲಿ ಶ್ರೀ ಸವಗದ್ದಿಗೆ ಸಂಗಮೇಶ್ವರ ಸ್ವಾಮಿಯ ರಥೋತ್ಸವ ಹಾಗೂ ಜಾತ್ರಾ ಮಹೋತ್ಸವದ ಅಂಗವಾಗಿ ನಾಡಿದ್ದು ದಿನಾಂಕ 18ರ ಗುರುವಾರ ಮುಂಜಾನೆ 6 ಗಂಟೆಗೆ ಉಚ್ಚಾಯ ರಥೋತ್ಸವ ಹಾಗೂ ಸಂಜೆ 4.30ಕ್ಕೆ ಶ್ರೀ ಸವಗದ್ದಿಗೆ ಸಂಗಮೇಶ್ವರ ಮಹಾಸ್ವಾಮಿಯ ರಥೋತ್ಸವ ಜರುಗಲಿದೆ. ದಿನಾಂಕ 19ರ ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಹಾಗೂ ಸಂಜೆ 4 ಗಂಟೆಗೆ ಬಯಲು ಜಂಗೀ ಕುಸ್ತಿ, ರಾತ್ರಿ 7.30ಕ್ಕೆ ಪಲ್ಲಕ್ಕಿ ಉತ್ಸವದೊಂದಿಗೆ ಓಕುಳಿ ಉತ್ಸವ ನಡೆಯಲಿದೆ.

## ಚುನಾವಣಾ ತರಬೇತಿಗೆ ಚಕ್ಕರ್, ಅನುಚಿತ ವರ್ತನೆಗೆ ಶಿಕ್ಷಕ ಅಮಾನತ್ತು

ದಾವಣಗೆರೆ, ಏ. 16 - ಚುನಾವಣಾ ಮತಗಟ್ಟೆ ಮಟ್ಟದ ಅಧಿಕಾರಿ ಸಿಬ್ಬಂದಿಗಳಿಗೆ ಚನ್ನಗಿರಿಯಲ್ಲಿ ಏರ್ಪಡಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಬೆಳಿಗ್ಗೆ ಹಾಜರಾಗಿ ಮಧ್ಯಾಹ್ನ ತರಬೇತಿಗೆ ಹಾಜರಾಗದೇ ಅನ್ಯ ಮಹಿಳಾ ಸಿಬ್ಬಂದಿಯೊಂದಿಗೆ ಹೊರ ಹೋಗಿದ್ದು ಇದನ್ನು ಪ್ರಶ್ನಿಸಿದ ತಹಶೀಲ್ದಾರ್ ಅವರೊಂದಿಗೆ ಅನುಚಿತ ವರ್ತನೆ ತೋರಿದ ಚನ್ನಗಿರಿ ಎಸ್.ಕೆ.ಎಂ.ಎಸ್ ಮಿಲ್ಲತ್ ಪ್ರೌಢಶಾಲೆ ಸಹ ಶಿಕ್ಷಕ ಸೈಯದ್ ಸುಲ್ತಾನ್ ಅಹಮದ್ ಅವರನ್ನು ಸೇವೆಯಿಂದ ಅಮಾನತು ಮಾಡಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ವೆಂಕಟೇಶ್ ಎಂ.ವಿ ಆದೇಶಿಸಿದ್ದಾರೆ.

## ಹೊನ್ನಾಳಿ, ಕೂಡಲಸಂಗಮ ಶ್ರೀಗಳ ಆಶೀರ್ವಾದ ಪಡೆದ ವಿನಯ್‌ಕುಮಾರ್



ದಾವಣಗೆರೆ, ಏ.16- ದಾವಣಗೆರೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್ ಕುಮಾರ್ ಅವರು ಹೊನ್ನಾಳಿಯ ಹಿರೇಕಲ್ಮಠದಲ್ಲಿ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಶ್ರೀಗಳು ಹಾಗೂ ಕೂಡಲ ಸಂಗಮ ಪಂಚಮಸಾಲಿ ಸಮಾಜದ ಜಯಮೃತ್ಯುಂಜಯ ಶ್ರೀಗಳನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

## ಕಂದಗಲ್ಲು : ನಾಡಿದ್ದು ರಥೋತ್ಸವ

ದಾವಣಗೆರೆ ತಾಲ್ಲೂಕಿನ ಕಂದಗಲ್ಲು ಗ್ರಾಮದಲ್ಲಿ ಶ್ರೀ ಆಂಜನೇಯ ಸ್ವಾಮಿ ರಥೋತ್ಸವ ಇಂದು ನಡೆಯಲಿದೆ.

ಇಂದು ಬೆಳಿಗ್ಗೆ 10.30ಕ್ಕೆ ಶ್ರೀ ವೀರಭದ್ರೇಶ್ವರ ಸ್ವಾಮಿ, ಶ್ರೀ ಆಂಜನೇಯ ಸ್ವಾಮಿ ರಥೋತ್ಸವ ನಡೆಯಲಿದ್ದು, ಮಧ್ಯಾಹ್ನ 12.30ಕ್ಕೆ ಕೆಂಡಾರ್ಚನೆ ನಡೆಯಲಿದೆ. ನಾಳೆ ಗುರುವಾರ ಸಂಜೆ 4ಕ್ಕೆ ಓಕಳಿ ನಂತರ ದೇವರುಗಳ ಪ್ರದಕ್ಷಿಣೆ ನಡೆಯಲಿದೆ.

ಶ್ರೀ ವೀರಭದ್ರೇಶ್ವರ ಸ್ವಾಮಿ, ಶ್ರೀ ಆಂಜನೇಯ ಸ್ವಾಮಿ ರಥೋತ್ಸವವು ಹೆಬ್ಬಾಳು ಶ್ರೀ ರುದ್ರೇಶ್ವರ ವಿರಕ್ತ ಮಠದ ಮಹಾಂತ ರುದ್ರೇಶ್ವರ ಸ್ವಾಮಿಗಳ ನೇತೃತ್ವದಲ್ಲಿ ನಡೆಯಲಿವೆ.

## ಹಳೇಬಾತಿಯಲ್ಲಿ ಇಂದು ಆಂಜನೇಯ ಸ್ವಾಮಿ ಮಹಾರಥೋತ್ಸವ



ಶ್ರೀ ಆಂಜನೇಯಸ್ವಾಮಿ ರಥೋತ್ಸವದ ಪ್ರಯುಕ್ತ ಇಂದು ಬೆಳಿಗ್ಗೆ ಶ್ರೀ ಸ್ವಾಮಿಯ ಆನೆ ಉತ್ಸವ ನಂತರ ಮಧ್ಯಾಹ್ನ 3 ಗಂಟೆಗೆ ಹರಿಸೇವೆ, ಮಧ್ಯಾಹ್ನ 4 ಗಂಟೆಗೆ ಬಾಯಿ ಬೀಗ, ಸಂಜೆ 6.30 ಕ್ಕೆ ದೊಗ್ಗಳ್ಳಿ ಶ್ರೀ ಆಂಜನೇಯ ಸ್ವಾಮಿಯನ್ನು ದೇವಸ್ಥಾನಕ್ಕೆ ಕರೆತರುವುದು. ರಾತ್ರಿ 10.30 ಗಂಟೆಗೆ ಶ್ರೀ ಆಂಜನೇಯಸ್ವಾಮಿಯ ಮಹಾರಥೋತ್ಸವ ಜರುಗಲಿದೆ.

## ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ ಒಂದು ತಿಂಗಳು ನಡೆಸುತ್ತಿರುವ ಮಜ್ಜಿಗೆ ವಿತರಣಾ ಕಾರ್ಯಕ್ರಮಕ್ಕೆ ಶ್ರೀಮತಿ ಕೆ.ಜೆ.ರಾಜಲಕ್ಷ್ಮಿ, ಡಾ.ರಮೇಶ್ ಮತ್ತು ಕುಟುಂಬದವರು ಇಂದಿನ ದಾನಿಗಳಾಗಿದ್ದಾರೆ. ಈ ಸತ್ಕಾರ್ಯಕ್ಕೆ ದಾನ ಮಾಡ ಬಯಸುವವರು ಶ್ರೀಮತಿ ಮಂಜುಳಾ ಬಸವಲಿಂಗಪ್ಪ (7483809312) ಅವರನ್ನು ಸಂಪರ್ಕಿಸಬಹುದು.

## ನಗರದಲ್ಲಿ ಇಂದು ಕರುಣಾದಿಂದ ಸೈಕಲ್ ವಿತರಣೆ


ಕರುಣಾ ಜೀವ ಕಲ್ಯಾಣ ಟ್ರಸ್ಟಿನಿಂದ ಬಡತನ ನಿರ್ಮೂಲನೆಗಾಗಿ 167ನೇ ಸೈಕಲ್ ಮತ್ತು 6ನೇ ತಿಂಡಿಗಾಡಿ ವಿತರಣಾ ಕಾರ್ಯಕ್ರಮವನ್ನು ಕರುಣಾ ಟ್ರಸ್ಟ್‌ನಲ್ಲಿ ಇಂದು ಸಂಜೆ 5 ಗಂಟೆಗೆ ಟ್ರಸ್ಟ್ ಕಚೇರಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನ ನಿರ್ದೇಶಕ ಶಿವನಕೆರೆ ಬಸವಲಿಂಗಪ್ಪ, ಶ್ರೀಮತಿ ಮಲ್ಲಿಕಾ ಎಸ್. ಹೆಗ್ಡೆ, ಮಕ್ಕಳ ತಜ್ಞ ಡಾ. ಎಸ್. ಮೃತ್ಯುಂಜಯ, ಬಸವರಾಜ್ ಒಡೆಯರ್, ಮಧುಸೂದನ್ ಮತ್ತಿತರರು ಉಪಸ್ಥಿತರಿರುವರು.

## ಮೂರನೇ ದಿನ, 3 ನಾಮಪತ್ರಗಳ ಸಲ್ಲಿಕೆಯೊಂದಿಗೆ 18 ಕ್ಕೆ ಏರಿಕೆ

ದಾವಣಗೆರೆ, ಏ. 16 - ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಮೇ 7 ರಂದು ಮತದಾನ ನಡೆಯಲಿದ್ದು, ನಾಮಪತ್ರ ಸಲ್ಲಿಕೆಗೆ ಮೂರನೇ ದಿನವಾದ ಇಂದು ಮೂವರು ಅಭ್ಯರ್ಥಿಗಳಿಂದ 3 ನಾಮಪತ್ರಗಳು ಸಲ್ಲಿಕೆಯಾಗಿವೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ: ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ.

**ನಾಮಪತ್ರ ಸಲ್ಲಿಸಿದವರ ವಿವರ** : ಅಖಿಲ ಭಾರತ ಹಿಂದೂ ಮಹಾ ಪಕ್ಷದಿಂದ ಎ.ಕೆ.ಗಣೇಶ್, ರಾಣಿ ಚೆನ್ನಮ್ಮ ಪಾರ್ಟಿಯಿಂದ ವೀರೇಶ್ ಎಸ್. ಪಕ್ಷೇತರರಾಗಿ ಬರ್ಕತ್ ಅಲಿ ಇಂದು ನಾಮಪತ್ರ ಸಲ್ಲಿಸಿದವರು. ಇದುವರೆಗೆ ಒಟ್ಟು 15 ಅಭ್ಯರ್ಥಿಗಳಿಂದ 18 ನಾಮಪತ್ರಗಳು ಸಲ್ಲಿಕೆಯಾಗಿವೆ.

## ಟಿ.ಎಂ. ನಿತ್ಯಾನಂದಮ್ಮ ನಿಧನ



ದಾವಣಗೆರೆ ಎಂಸಿಸಿ ಬಿ ಬ್ಲಾಕ್ ವಾಸಿ ದಿ. ಡಾ. ಟಿ.ಎಂ. ಚಂದ್ರಶೇಖರಯ್ಯನವರ ಧರ್ಮಪತ್ನಿ ಟಿ.ಎಂ. ನಿತ್ಯಾನಂದಮ್ಮ (87) ಇವರು ದಿನಾಂಕ 16.04.2024ರ ಮಂಗಳವಾರ ಸಂಜೆ 4ಕ್ಕೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 17.04.2024ರ ಬುಧವಾರ ಬೆಳಿಗ್ಗೆ 11ಕ್ಕೆ ನಗರದ ಗ್ಲಾಸ್ ಹೌಸ್ ಹಿಂಭಾಗದಲ್ಲಿರುವ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

# ಎನ್‌ಡಿಎ ಮೈತ್ರಿಕೂಟ ಸೋಲಿಸಲು ಭಾರತೀಯ ಕಮ್ಯೂನಿಸ್ಟ್ ಶ್ರಮ

**ಪತ್ರಿಕಾಗೋಷ್ಠಿಯಲ್ಲಿ ಸಿಪಿಐ ರಾಜ್ಯ ನಾಯಕ ಡಾ.ಸಿದ್ದನಗೌಡ ಪಾಟೀಲ್**

ದಾವಣಗೆರೆ, ಏ.16- ದೇಶದಾದ್ಯಂತ ನಡೆಯ ಲಿರುವ ಲೋಕಸಭಾ ಚುನಾವಣೆಯಲ್ಲಿ ಭಾರತೀಯ ಕಮ್ಯೂನಿಸ್ಟ್ ಪಕ್ಷವು ಇಂಡಿಯಾ ಒಕ್ಕೂಟದ ಭಾಗ ವಾಗಿ ಬಿಜೆಪಿ ಹಾಗೂ ಎನ್‌ಡಿಎ ಮೈತ್ರಿಕೂಟವನ್ನು ಸೋಲಿಸಲು ಶ್ರಮಿಸುತ್ತಿದೆ ಎಂದು ಸಿಪಿಐ ರಾಜ್ಯ ನಾಯಕ ಡಾ.ಸಿದ್ದನಗೌಡ ಪಾಟೀಲ್ ತಿಳಿಸಿದ್ದಾರೆ.

ಮಂಗಳವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗೆರೆ ಲೋಕಸಭಾ ಚುನಾವಣೆಯಲ್ಲಿ ಇಂಡಿಯಾ ಒಕ್ಕೂಟದ ಅಭ್ಯರ್ಥಿ ಆಗಿರುವ ಕಾಂಗ್ರೆಸ್ ಪಕ್ಷಕ್ಕೆ ಸಿಪಿಐ ಬೆಂಬಲ ಸೂಚಿಸಲಿದೆ. ಮತದಾರರು ಡಾ.ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಬೆಂಬಲ ಸೂಚಿಸುವಂತೆ ಮನವಿ ಮಾಡಿದರು. ದೇಶದಲ್ಲಿ ಮತದಾನದ ಹಕ್ಕನ್ನು ಉಳಿಸಿಕೊಳ್ಳಲು ಚುನಾವಣೆ ಉಳಿಸಿಕೊಳ್ಳ ಬೇಕು.ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಚುನಾವಣೆ ಪದ್ದತಿಯೇ ಇಲ್ಲದಂತಾಗುತ್ತದೆ. ಒಂದು ದೇಶ ಒಬ್ಬ ನಾಯಕ ಎನ್ನುವ ಪರಿಸ್ಥಿತಿ ಎದುರಾಗಿ ಹಿಟ್ಲರ್ ಆಡಳಿತ ಬರಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಬಿಜೆಪಿ ಅಧಿಕಾರಕ್ಕೆ ಬಂದರೆ ಪಾರ್ಲಿಮೆಂಟ್ ಕಾಯುವ ಬದಲು ಕಾರ್ಪೊರೇಟ್ ಕಂಪನಿಗಳನ್ನು ಕಾಯಲು ಅವಕಾಶ ಮಾಡಿಕೊಡುತ್ತದೆ. ಏಕವ್ಯಕ್ತಿ ಆಡಳಿತ ಬರಲಿದೆ ಈ ನಿಟ್ಟಿನಲ್ಲಿ ಅಪಾಯಕಾರಿ ಹೆಜ್ಜೆ ಇಡುತ್ತಿರುವ ಬಿಜೆಪಿಯನ್ನು ದೂರ ಇಡಲು ಪ್ರಜಾಸತ್ತೆಯ ಅಳಿವು ಉಳಿವಿನ ಪ್ರಶ್ನೆಯಾಗಿರುವ ಲೋಕಸಭಾ ಚುನಾವಣೆಯಲ್ಲಿ ದೇಶದ ಜನತೆ ಬಿಜೆಪಿ ಪಕ್ಷವನ್ನು ಸೋಲಿಸಬೇಕೆಂದು ಕರೆ ನೀಡಿದರು.

ಪತ್ರಿಕಾಗೋಷ್ಟಿಯಲ್ಲಿ ಸಿಪಿಐ ಪಕ್ಷದ ಹೆಚ್. ಜಿ.ಉಮೇಶ್, ಆನಂದ ರಾಜ್, ಆವರಗೆರೆ ಚಂದ್ರು, ವಿ.ಲಕ್ಷ್ಮಣ, ಟಿ.ಎಸ್.ನಾಗರಾಜ್, ಎಂ.ಬಿ.ಶಾರದಮ್ಮ ಇತರರು ಇದ್ದರು.

# ನಗರದಲ್ಲಿ ಬ್ರಾಂಡೆಡ್ ಉಡುಪುಗಳ ಮಾರಾಟ ಮೇಳ



ದಾವಣಗೆರೆ, ಏ. 16- ಕಂಪನಿಯ ಆರ್ಥಿಕ ಹಣಕಾಸಿನ ಬಿಕ್ಕಟ್ಟಿನಿಂದ ಹಾಗೂ ಪಾರ್ಟಿಗಳ ಮಿತಿ ಮೀರಿದ ಬಾಕಿ ಹಣದ ಪಾವತಿ ಇರುವುದರಿಂದ ಎಲ್ಲಾ ಹೊಸ ಗಾರ್ಮೆಂಟ್ಸ್‌ಗಳನ್ನು ಅತಿ ಕಡಿಮೆ ದರದಲ್ಲಿ ರೆಡಿಮೇಡ್ ಉಡುಪುಗಳನ್ನು ನಗರದ ಸದರನ್ ಸ್ಟಾರ್‌ನಲ್ಲಿ ಮಾರಾಟ ಮೇಳ ನಡೆಯುತ್ತಿದ್ದು, ಈ ಮೇಳ ಮೂರು ದಿನಗಳಲ್ಲಿ ಕೊನೆಗೊಳಿಸಲಾಗುವುದು. ಬ್ರಾಂಡೆಡ್ ಕಂಪನಿಗಳ ಉಡುಪುಗಳು ಮಕ್ಕಳು, ಯುವಕರು, ಪುರುಷರು, ವಯೋವೃದ್ದರು, ಹೀಗೆ ಎಲ್ಲ ವರ್ಗದವರಿಗೂ ಲಭ್ಯವಿದ್ದು, ಶೇ.80 ವರೆಗೂ ಭಾರೀ ರಿಯಾಯಿತಿ ನೀಡಲಾಗಿದೆ.

ಪುರುಷರ ಪ್ರೀಮಿಯಮ್ ಸಿದ್ದ ಉಡುಪುಗಳು ಶರ್ಟ್, ಟೀ ಶರ್ಟ್, ಜೆಂಟ್ಸ್ ಪ್ಯಾಂಟ್, ಕಂಪರ್ಟ್ ಫಿಟ್, ನ್ಯಾರೋ, ಪೆನ್ಸಿಲ್, ರಿಲ್ಯಾಕ್ಸ್‌ಡ್, ಕ್ಯಾಷುಯಲ್ ಫಿಟ್ ಪ್ಯಾಂಟ್, ಕಿಡ್ಸ್ ಪ್ಯಾಂಟ್, ಟೀ ಶರ್ಟ್, ಲೋವೆರ್ ಬರ್ಮುಡಾ, ಟಾಫ್, ಕೇಪ್ರೀ, ಮುಂತಾದವು ಕೇವಲ 499 ರಿಂದ 999 ರವರೆಗೆ ಪ್ರಾರಂಭವಾಗುತ್ತದೆ. ಮಹಿಳೆಯರ ಸಿದ್ದ ಉಡುಪುಗಳು ಲಾಂಗ್, ಕುರ್ತೀಸ್, ಪ್ಲಾಜೋ, ಶಾರ್ಟ್‌ಕುರ್ತೀಸ್, ಹೆವಿ ರಾಯನ್, ಕಂಪ್ಯೂಟರ್ ವರ್ಕ್, ಲೇಡಿಸ್ ಜೀನ್ಸ್ ಪ್ಯಾಂಟ್ ಮತ್ತು ಲೇಡಿಸ್ ಜೀನ್ಸ್ ಜಾಕೆಟ್ ಜೆಂಟ್ಸ್ ಮತ್ತು ಮಕ್ಕಳ ಉಡುಪುಗಳು 149 ರಿಂದ 599 ರವರೆಗೆ ಲಭ್ಯಗಳು.

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

50 1974 2023

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಬುಧವಾರ, ಏಪ್ರಿಲ್ 17, 2024

☎ 08192 254736 · 91642 99999



# ಮೋದಿ ಎದುರು ಗ್ಯಾರಂಟಿ ಗೌಣ

ದಾವಣಗೆರೆ, ಏ. 16 - ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಗ್ಯಾರಂಟಿಗಳು ಪರಿಣಾಮ ಬೀರುವುದಿಲ್ಲ. ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದಲ್ಲಿ ಬಿಜೆಪಿ ದೊಡ್ಡ ಅಂತರದಲ್ಲಿ ಗೆಲುವು ಸಾಧಿಸಲಿದೆ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕಸಭಾ ಚುನಾವಣೆಯಲ್ಲಿ ಗ್ಯಾರಂಟಿಗಳು ಪರಿಣಾಮ ಬೀರುವುದಿಲ್ಲ. ಪ್ರಧಾನಿ ಮೋದಿ ಎದುರು ಇವು ಗೌಣವಾಗಲಿವೆ. ಹಲವಾರು ಸಮೀಕ್ಷೆಗಳೇ ಈ ವಿಷಯ ತಿಳಿಸುತ್ತಿವೆ ಎಂದರು.

ಕಾಂಗ್ರೆಸ್ ಪಕ್ಷ ತನ್ನ ಪ್ರಧಾನಮಂತ್ರಿ ಅಭ್ಯರ್ಥಿ ಹೆಸರು ಹೇಳುವ ಸ್ಥಿತಿಯಲ್ಲೂ ಇಲ್ಲ. ಕಾಂಗ್ರೆಸ್ ಪಕ್ಷದ ಸ್ನೇಹಿತರು ಬಹಳಷ್ಟು ಮಾತನಾಡುತ್ತಾರೆ. ಅದಕ್ಕೆ ಚುನಾವಣೆಯಲ್ಲಿ ಮತದಾರರು ಉತ್ತರ ಕೊಡುತ್ತಾರೆ ಎಂದು ಯಡಿಯೂರಪ್ಪ ಹೇಳಿದರು.

ನರೇಂದ್ರ ಮೋದಿ ಅವರು 3ನೇ ಬಾರಿ ಪ್ರಧಾನಿಯಾಗಲಿದ್ದು, ಸಚಿವ ರಾಜನಾಥ್ ಸಿಂಗ್ ನೇತೃತ್ವದಲ್ಲಿ 5 ವರ್ಷಗಳ ಕಾರ್ಯಕ್ರಮವನ್ನು ಈಗಾಗಲೇ ರೂಪಿಸಲಾಗುತ್ತಿದೆ ಎಂದು ಹೇಳಿದರು.

ರಾಜ್ಯ ಕಾಂಗ್ರೆಸ್ ಸರ್ಕಾರ 11 ಸಾವಿರ ಕೋಟಿ ರೂ.ಗಳ ಎಸ್‌ಸಿಎಸ್‌ಪಿ - ಟಿಎಸ್‌ಪಿ ಹಣವನ್ನು ಬೇರೆ ಉದ್ದೇಶಗಳಿಗೆ ಬಳಸಿದೆ. ಆ ಮೂಲಕ ದಲಿತರಿಗೆ

**ಬಿಜೆಪಿ-ಜೆಡಿಎಸ್ ಮೈತ್ರಿ ಮುಂದಿನ ಚುನಾವಣೆಗಳಲ್ಲೂ ಮುಂದುವರಿಕೆ : ಯಡಿಯೂರಪ್ಪ ವಿಶ್ವಾಸ**

ಅನ್ಯಾಯ ಮಾಡಲಾಗಿದ್ದು, ಕಾಂಗ್ರೆಸ್ ಪಕ್ಷ ದಲಿತ ವಿರೋಧಿಯಾಗಿದೆ ಎಂದು ಟೀಕಿಸಿದರು.

ಬಿಜೆಪಿ ಹಾಗೂ ಜೆಡಿಎಸ್‌ಗಳ ಮೈತ್ರಿ ಕೇವಲ ಲೋಕಸಭಾ ಚುನಾವಣೆಗೆ ಸೀಮಿತವಾಗುವುದಿಲ್ಲ. ಮುಂದಿನ ಚುನಾವಣೆಗಳಲ್ಲೂ ಮೈತ್ರಿ ಮುಂದುವರೆಯಲಿದೆ. ಸಣ್ಣ ಪುಟ್ಟ ಭಿನ್ನಾಭಿಪ್ರಾಯ ಬದಿಗೊತ್ತಿ ಹಾಲು ಜೇನಿನಂತೆ ಇರಲಿವೆ ಎಂದೂ ಯಡಿಯೂರಪ್ಪ ಹೇಳಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡ ಅವರ ಆಶಯದಂತೆ ಮೈತ್ರಿ ಮಾಡಿಕೊಳ್ಳಲಾಗಿದೆ. ಎಲ್ಲಾ ಚುನಾವಣೆಗಳಲ್ಲೂ ಮೈತ್ರಿ ಮುಂದುವರೆಯಬೇಕು ಎಂಬುದು ಜನರ ಆಶಯ ಎಂದು ಹೇಳಿದರು.

ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಭಾರತ ರತ್ನ ಪ್ರಶಸ್ತಿ ನೀಡಲಿಲ್ಲ. ದೆಹಲಿಯಲ್ಲಿ ಅವರ (5ನೇ ಪುಟಕ್ಕೆ)

# ಧರ್ಮ, ದೇಶ ಉಳಿಸಲು ಮತ್ತೆ ಮೋದಿ

## ಯುವ ಸಮಾವೇಶದಲ್ಲಿ ಮೈಸೂರು ಸಂಸದ ಪ್ರತಾಪ್ ಸಿಂಹ ಪ್ರತಿಪಾದನೆ

ದಾವಣಗೆರೆ, ಏ. 16 - ಹಿಂದುತ್ವ ಉಳಿದರೆ ಮಾತ್ರ ದೇಶ ಉಳಿಯಲು ಸಾಧ್ಯ. ಧರ್ಮ ಮತ್ತು ದೇಶ ಉಳಿಸಲು ಮೂರನೇ ಅವಧಿಗೆ ಮೋದಿ ನೇತೃತ್ವದ ಸರ್ಕಾರ ಬರಬೇಕು ಎಂದು ಮೈಸೂರು ಸಂಸದ ಪ್ರತಾಪ್ ಸಿಂಹ ಕರೆ ನೀಡಿದ್ದಾರೆ.

ನಗರದ ರೇಣುಕ ಮಂದಿರದಲ್ಲಿ ಜಿಲ್ಲಾ ಬಿಜೆಪಿ ಯುವ ಮೋರ್ಚಾ ವತಿಯಿಂದ ಆಯೋಜಿಸಲಾಗಿದ್ದ ಯುವ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಯು.ಪಿ.ಎ. ಅವಧಿಯಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗ ಸರಣಿ ಬಾಂಬ್ ಸ್ಫೋಟಗಳು ಸಂಭವಿಸಿದ್ದವು. ಮುಂಬೈ ಮೇಲೆ ಉಗ್ರವಾದಿ ದಾಳಿ ನಡೆದಿತ್ತು. ಹಿಂದೂಗಳಿಗೆ ಉಳಿಗಾಲವೇ ಇಲ್ಲ ಎಂಬ ರೀತಿಯ ಭಯದ ವಾತಾವರಣ ಉಂಟಾಗಿತ್ತು ಎಂದು ಹೇಳಿದರು.

ಆದರೆ, ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಚೀನಾಗೆ ರಕ್ಷಣಾ ಪಡೆಗಳು ದಿಟ್ಟ ಉತ್ತರ ನೀಡುತ್ತಿವೆ. ಇದಕ್ಕೆ ಮೋದಿ ಅವರನ್ನು ದೇಶದ ಜನ ಗೆಲ್ಲಿಸಿದ್ದೇ ಕಾರಣ ಎಂದು ಪ್ರತಾಪ್ ಸಿಂಹ ಹೇಳಿದರು.

ಈಗ ವಿಶ್ವದ ದಿಗ್ಗಜ ದೇಶಗಳ ಜೊತೆ ಭಾರತ ಭೂ ರಾಜಕೀಯ ಪರಿಸ್ಥಿತಿಯ ಕುರಿತು ನಿರ್ಣಯಿಸುವ ಹಂತಕ್ಕೆ ಬಂದಿದೆ. ವಿಶ್ವದ ಐದನೇ ಅತಿ ದೊಡ್ಡ ಆರ್ಥಿಕತೆಯಾಗಿದೆ ಎಂದು ಪ್ರತಾಪ್ ಸಿಂಹ ಹೇಳಿದರು.

2004ರಲ್ಲಿ ಕಾರ್ಯಕರ್ತರು ಮೈ ಮರೆತ ಕಾರಣ ಅಟಲ್ ಬಿಹಾರಿ ವಾಜಪೇಯಿ ಸರ್ಕಾರ ಸೋಲಬೇಕಾಯಿತು. ಈ ಬಾರಿಯೂ ನಾವು ಕೆಲಸ ಮಾಡದಿದ್ದರೆ ಪಕ್ಷಕ್ಕೇ ಅಷ್ಟೇ ಅಲ್ಲ ದೇಶಕ್ಕೆ ಅನ್ಯಾಯ ಆಗುತ್ತದೆ. ಟಿಕೆಟ್ ಯಾರಿಗೆ ಕೊಟ್ಟಿದ್ದಾರೆ ಎಂಬುದನ್ನು ಪರಿಗಣಿಸದೇ, ಮೋದಿ ಅವರನ್ನು ಗೆಲ್ಲಿಸಲು ಶ್ರಮಿಸಬೇಕು ಎಂದವರು ಕರೆ ನೀಡಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಕಳೆದ ಒಂದು ವರ್ಷದ ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ರಸ್ತೆಯ ಗುಂಡಿ ಮುಚ್ಚಲೂ ಹಣವಿಲ್ಲದಂತಾಗಿದೆ. ನೀರಿನ ಹಾಹಾಕಾರ ಹೆಚ್ಚಾಗಿದ್ದು, ಹೊಸ ಬೋರ್ ಕೊರೆಸಲೂ ಸರ್ಕಾರದ ಬಳಿ ಹಣವಿಲ್ಲ ಎಂದು ಟೀಕಿಸಿದರು. ಕೇಂದ್ರದಲ್ಲಿ ಮೋದಿ ಸರ್ಕಾರ ಮತ್ತೆ ಅಧಿಕಾರಕ್ಕೆ ಬರುವುದು ನಿಶ್ಚಿತವಾಗಿದೆ. ಇಲ್ಲಿಯೂ ಬಿಜೆಪಿ ಅಭ್ಯರ್ಥಿ ಗೆದ್ದಲ್ಲಿ, ದಾವಣಗೆರೆಯನ್ನು ಮಾದರಿ ಜಿಲ್ಲೆಯಾಗಿ ರೂಪಿಸಲಾಗುವುದು ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್ ಮಾತನಾಡಿ, ಬಿಜೆಪಿ ಯುವ ಮೋರ್ಚಾ ಪಕ್ಷದ ಆತ್ಮ ಇದ್ದಂತೆ. ಯುವ ಮೋರ್ಚಾದಲ್ಲಿ ಕಾರ್ಯ ನಿರ್ವಹಿಸಿದವರು ಉನ್ನತ ಸ್ಥಾನಗಳಿಗೆ ತಲುಪಿದ್ದಾರೆ. ಯುವ ಕಾರ್ಯಕರ್ತರು ನಿಸ್ವಾರ್ಥದಿಂದ ದೇಶಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಹೇಳಿದರು.

ರಾಜ್ಯ ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷ ಜಿ.ಎಸ್. ಶ್ಯಾಮ್ ಮಾತನಾಡಿ, ಕಾಂಗ್ರೆಸ್ ಪಕ್ಷದವರು ದೇಶ ವಿಭಜನೆಯ ಮಾತನಾಡುತ್ತಿದ್ದಾರೆ. ಇಂಥವರಿಗೆ ಯುವ ಶಕ್ತಿ ಚುನಾವಣೆಯಲ್ಲಿ ಉತ್ತರ ನೀಡಬೇಕಿದೆ ಎಂದು ಹೇಳಿದರು.

ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಆರ್.ಎಲ್. ಶಿವಪ್ರಕಾಶ್ ಪ್ರಾಸ್ತಾವಿಕವಾಗಿ ಮಾತನಾಡಿ, ಕಳೆದ ಒಂದು ವರ್ಷದಲ್ಲಿ ರಾಜ್ಯದಲ್ಲಿ ಅಭಿವೃದ್ಧಿ ಸ್ಥಗಿತವಾಗಿದೆ. (5ನೇ ಪುಟಕ್ಕೆ)



### ಶಿವಶಂಕರಪ್ಪ ಬಿಜೆಪಿಯ ಹಿತೈಷಿ, ಮೋದಿ ಅಭಿಮಾನಿ

**ಇತ್ತೀಚೆಗೆ ವೀರಶೈವ ಮಹಾಸಭಾದ ಸಭೆ ನಡೆಯುವಾಗ ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿಯ ಬಿ.ವೈ. ರಾಘವೇಂದ್ರ ಗೆಲ್ಲಿಸುವಂತೆ ಕಾಂಗ್ರೆಸ್ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಕರೆ ನೀಡಿದ್ದರು. ಶಿವಶಂಕರಪ್ಪ ಅವರು ಬಿಜೆಪಿಯ ಹಿತೈಷಿ ಹಾಗೂ ಮೋದಿ ಅಭಿಮಾನಿ ಎಂದು ಸಂಸದ ಪ್ರತಾಪ್ ಸಿಂಹ ಹೇಳಿದರು. ದೇಶ ಕಾಯಲು ನರೇಂದ್ರ ಮೋದಿ ಮತ್ತೆ ಪ್ರಧಾನಿಯಾಗಬೇಕು ಎಂಬುದು ಶಿವಶಂಕರಪ್ಪನವರಿಗೂ ತಿಳಿದಿದೆ. ಮೋದಿ ಮತ್ತೆ ಪ್ರಧಾನಿಯಾಗಲು ಶಿವಮೊಗ್ಗದಲ್ಲಿ ರಾಘವೇಂದ್ರ ಗೆಲ್ಲಿಸಬೇಕು ಎಂದಾದರೆ, ದಾವಣಗೆರೆಯಲ್ಲಿ ಗಾಯತ್ರಿ ಸಿದ್ದೇಶ್ವರ್ ಗೆಲ್ಲಿಸಬೇಕೆಂದು ಬಿಜೆಪಿ ಕಾರ್ಯಕರ್ತರು ಅರ್ಥ ಮಾಡಿಕೊಳ್ಳಬೇಕಿದೆ ಎಂದರು.**

### ಮೋದಿ ಗುಂಪಿನಿಂದ ಗೆಲುವು

**ಬೇರೆ ಬೇರೆ ಪಕ್ಷಗಳಿಗೆ ಬೇರೆ ಬೇರೆ ಮತದಾರ ಗುಂಪುಗಳಿರುತ್ತವೆ. ಆದರೆ, ನರೇಂದ್ರ ಮೋದಿ ಅವರ ಪರವಾದ ಪ್ರತ್ಯೇಕ ಗುಂಪು ಸೃಷ್ಟಿಯಾಗಿದೆ. ಈ ಗುಂಪು ಸುನಾಮಿ ರೀತಿಯಲ್ಲಿ ದಾವಣಗೆರೆಯಲ್ಲಿ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರಿಗೆ ಗೆಲುವು ತರಲಿದೆ ಎಂದು ಸಂಸದ ಪ್ರತಾಪ್ ಸಿಂಹ ಹೇಳಿದ್ದಾರೆ.**
**2 ಸಾವಿರ ರೂ.ಗಳ ಗ್ಯಾರಂಟಿಗೆ ಮತ ಹಾಕುವ ಕೋಟಾ ಮುಗಿದಿದೆ. ಈ ಬಾರಿ ಜನರು ದೇಶಕ್ಕಾಗಿ ಮತ ಚಲಾಯಿಸಲಿದ್ದಾರೆ ಎಂದು ಹೇಳಿದರು.**

# 57 ಕೆರೆ ಯೋಜನೆ ಕಾಂಗ್ರೆಸ್ ಸರ್ಕಾರದ ಸಾಧನೆ

## ಜಗಳೂರಿನ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಸಚಿವ ಎಸ್ಸೆಸ್ಸೆಂ



ಜಗಳೂರು, ಏ. 16 - ಪಟ್ಟಣದಲ್ಲಿ ನಡೆದ ತರಳಬಾಳು ಹುಣ್ಣಿಮೆ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೊಟ್ಟ ಮಾತಿನಂತೆ ಬರಪೀಡಿತ ತಾಲ್ಲೂಕಿನ 57 ಕೆರೆಗಳನ್ನು ತುಂಬಿಸುವ ಯೋಜನೆಯನ್ನು ಬಜೆಟ್ ನಲ್ಲಿ ಸೇರ್ಪಡೆಗೊಳಿಸಿದ್ದರಿಂದ, ಈ ಭಾಗದ ನೀರಾವರಿ ಕನಸು ನನಸಾಗುತ್ತಿದೆ. ಇದು ಕಾಂಗ್ರೆಸ್ ಪಕ್ಷದ ಸಾಧನೆಯಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದಲ್ಲಿ ಲೋಕಸಭಾ ಚುನಾವಣೆ ಪ್ರಯುಕ್ತ ರೋಡ್ ಶೋ ನಂತರ ವೀರಶೈವ ಕಲ್ಯಾಣ ಮಂಟಪದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಸಚಿವರು ಮಾತನಾಡಿದರು.

57 ಕೆರೆ ಯೋಜನೆ ಪರಿಣಾಮ ಹಿಂದುಳಿದ ಜಗಳೂರು ತಾಲ್ಲೂಕಿನಲ್ಲಿ ಈಗಾಗಲೇ 10 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗಿದೆ. ಭದ್ರಾ ಮೇಲ್ದಂಡೆ ಯೋಜನೆ ಜಾರಿಯಾದಲ್ಲಿ ಇಡೀ ತಾಲ್ಲೂಕು ಸಮಗ್ರ ನೀರಾವರಿಯಾಗಲಿದೆ. ಶಾಸಕ ಬಿ.ದೇವೇಂದ್ರಪ್ಪ ಅವರೊಂದಿಗೆ ಸೇರಿ ಸಮಗ್ರ ನೀರಾವರಿಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗುವಂತೆ ಮಾಜಿ ಸಂಸದ ಚನ್ನಯ್ಯ ಒಡೆಯರ್ ಅವರ ಪುತ್ರ ಉದಯ ಶಂಕರ್ ಒಡೆಯರ್ ಹಾಗೂ ಹೊನ್ನಾಳಿಯ ಎಚ್. ಬಿ.ಮಂಜಪ್ಪ ಅವರಿಗೆ ಕೇಳಿಕೊಂಡೆ. ಆದರೆ ಬೇರೆ ಬೇರೆ ಕಾರಣಗಳಿಗಾಗಿ ಅವರು ಸ್ಪರ್ಧೆಗೆ ಒಪ್ಪಲಿಲ್ಲ. ಟಿಕೆಟ್ ಕೊಡುವಂತೆ ವಿನಯ್ ಕುಮಾರ್ ನನಗೆ ಕೇಳಿದ್ದರು. ನಮ್ಮ ಜಿಲ್ಲೆಯವರೇ ಇರುವಾಗ ಹೊರ ಜಿಲ್ಲೆಯವರಿಗೆ ಹೇಗೆ ಕೊಡೋಕಾ ಗುತ್ತೆ ಅಂತಾ ಹೇಳಿದ್ದೆ. ನಮ್ಮ ಜಿಲ್ಲೆಯಲ್ಲಿ ಸಮರ್ಥ ವ್ಯಕ್ತಿಗಳಿ ಲ್ಲವೇ. ಹೈ ಕಮಾಂಡ್ ಸರ್ವೇ ಮಾಡಿ ಡಾ. ಪ್ರಭಾ ಅವರೇ ಅಭ್ಯರ್ಥಿಯಾಗಬೇಕು ಎಂದು ಹೇಳಿದ್ದ ರಿಂದ ಕೊನೆಗೆ ಒಪ್ಪಿದ್ದು, ಎಲ್ಲರೂ ಒಮ್ಮತದಿಂದ ಸಹ ಕಾರ ನೀಡಿ ಗೆಲ್ಲಿಸಿ ಎಂದು ಸಚಿವ ಮಲ್ಲಿಕಾರ್ಜುನ್ ಮನವಿ ಮಾಡಿದರು.

ಶಾಸಕ ಬಿ. ದೇವೇಂದ್ರಪ್ಪ ಮಾತನಾಡಿ, ಕಾಂಗ್ರೆಸ್ ಪಕ್ಷದಿಂದ ಈ ಬಾರಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಸಮರ್ಥ ಅಭ್ಯರ್ಥಿಯಾಗಿದ್ದು, ಜಗಳೂರು ವಿಧಾನ ಸಭಾ ಕ್ಷೇತ್ರದಿಂದ ಕನಿಷ್ಟ 25 ಸಾವಿರ ಮತಗಳ ಲೀಡ್ ಪಡೆಯಲಿದ್ದಾರೆ ಎಂದರು.

ಮುಖಂಡ ಡಾ. ಟಿ.ಜಿ. ರವಿಕುಮಾರ್ ಮಾತನಾಡಿ, ಬಿಜೆಪಿ ಕ್ಯಾನ್ಸರ್ ಇದ್ದಂತೆ. ಬುಡ ಸಮೇತ ಬಿದ್ದು ಹೋಗುತ್ತದೆ. ಜಿಲ್ಲೆಯಲ್ಲಿ ಬಿಜೆಪಿ ಪಕ್ಷ ಕೆಲವು ವ್ಯಕ್ತಿಗಳ ಕಪಿಮುಷ್ಟಿಯಲ್ಲಿ ಸಿಲುಕಿದೆ. ಪ್ರಾಮಾಣಿಕ ಕಾರ್ಯಕರ್ತರ ಮೇಲೆ ದರ್ಪ, ದೌರ್ಜನ್ಯ ನಡೆಯುತಿದ್ದು, ಅದನ್ನು ಪ್ರತಿಭಟಿಸಿ ಆತ್ಮ ಸಂತೋಷದಿಂದ ನಾನು ಹಾಗೂ ನನ್ನ ತಂದೆ ಟಿ. ಗುರುಸಿದ್ದನಗೌಡ ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದೇವೆ. ತವರು ಮನೆಗೆ ಬಂದಷ್ಟು ಸಂತಸವಾಗುತ್ತಿದೆ ಎಂದು ಹೇಳಿದರು.

ಬಿಜೆಪಿ ಮುಖಂಡ ಲಿಂಗಣ್ಣನಹಳ್ಳಿ ಕೃಷ್ಣ ಮೂರ್ತಿ, ಕೆಚ್ಚೇನಹಳ್ಳಿ ಸಿದ್ದೇಶ್, ಗಿಡ್ಡನಕಟ್ಟೆ ಕಾಂತರಾಜ್ ಸೇರಿದಂತೆ 150ಕ್ಕೂ ಹೆಚ್ಚು ಕಾರ್ಯಕರ್ತರು ಬಿಜೆಪಿ ಪಕ್ಷ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಸಮಾರಂಭದಲ್ಲಿ ಮಾಜಿ ಶಾಸಕ ಟಿ. ಗುರುಸಿದ್ದನಗೌಡ, ಬ್ರಾಹ್ಮಣ ಅಭಿವೃದ್ಧಿ ನಿಗಮದ ಅಧ್ಯಕ್ಷ ಅಸಗೋಡು ಜಯಸಿಂಹ, (5ನೇ ಪುಟಕ್ಕೆ)

# ಯುಪಿಎಸ್‌ಸಿ : ಆದಿತ್ಯ ಶ್ರೀವಾಸ್ತವಗೆ ಮೊದಲ ಸ್ಥಾನ



ನವದೆಹಲಿ, ಏ. 16 – ಕೇಂದ್ರ ಲೋಕ ಸೇವಾ ಆಯೋಗ (ಯು.ಪಿ.ಎಸ್.ಸಿ.)ದ ಪರೀಕ್ಷೆಯ ಫಲಿತಾಂಶ ಪ್ರಕಟಿಸಲಾಗಿದ್ದು, ಆದಿತ್ಯ ಶ್ರೀವಾಸ್ತವ ಅವರು ಮೊದಲ ಸ್ಥಾನ ಗಳಿಸಿದ್ದಾರೆ.

ಐ.ಎ.ಎಸ್. ಪರೀಕ್ಷೆ ಎಂದೇ ಹೆಸರಾಗಿರುವ ಯು.ಪಿ.ಎಸ್.ಸಿ. ಪರೀಕ್ಷೆಯಲ್ಲಿ, ಐ.ಐ.ಟಿ. ಕಾನ್ಪುರದ ಎಲೆಕ್ಟ್ರಿಕಲ್ ಇಂಜಿನಿಯರ್ ಶ್ರೀವಾಸ್ತವ ಮೊದಲ ಸ್ಥಾನ ಪಡೆದಿದ್ದಾರೆ.

ಎನ್.ಐ.ಟಿ. ರೂರ್ಕೆಲಾದ ಕಂಪ್ಯೂಟರ್ ಸೈನ್ಸ್ ಪದವೀಧರ ಅನಿಮೇಶ್ ಪ್ರಧಾನ್ ಅವರು ಎರಡನೇ ಸ್ಥಾನದಲ್ಲಿದ್ದಾರೆ. ದೆಹಲಿ ವಿಶ್ವವಿದ್ಯಾಲಯದ ಬಿ.ಎ. ಪದವೀಧರೆ ಅನನ್ಯ ರೆಡ್ಡಿ ಅವರು ಮೂರನೇ ಸ್ಥಾನದಲ್ಲಿದ್ದಾರೆ. 664 ಪುರುಷರು (5ನೇ ಪುಟಕ್ಕೆ)

# ಯುಪಿಎಸ್‌ಸಿ: ದಾವಣಗೆರೆ ಸೌಭಾಗ್ಯಗೆ 101ನೇ ರ್‍ಯಾಂಕ್




ಬೆಂಗಳೂರು, ಏ. 16 - ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆ ಫಲಿತಾಂಶ ಮಂಗಳವಾರ ಪ್ರಕಟವಾಗಿದ್ದು, ಸೌಭಾಗ್ಯ ಬೀಳಗಿಮಠ ಅವರು 101ನೇ ರ್‍ಯಾಂಕ್ ಪಡೆದಿದ್ದಾರೆ.

ಐ.ಎ.ಎಸ್. ಪರೀಕ್ಷೆ ಎಂದೇ ಹೆಸರಾಗಿರುವ ಯು.ಪಿ.ಎಸ್.ಸಿ. ಪರೀಕ್ಷೆಯಲ್ಲಿ ಈ ಸಾಧನೆ ಮಾಡಿರುವ ಸೌಭಾಗ್ಯ ಅವರು ದಾವಣಗೆರೆಯವರು. ಅವರು ಶರಣಯ್ಯ ಸ್ವಾಮಿ ಮತ್ತು ಶರಣಮ್ಮ ದಂಪತಿಯ ಪುತ್ರಿ. ಶರಣಯ್ಯ ಅವರು ನರ್ಸರಿ ನಡೆಸುತ್ತಿದ್ದಾರೆ, ಶರಣಮ್ಮ ಅವರು ಗೃಹಿಣಿ. ಸೌಭಾಗ್ಯ ಅವರು ಎರಡನೇ ಪ್ರಯತ್ನದಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ (5ನೇ ಪುಟಕ್ಕೆ)

# ಜೀವನ ಯಾನ ಮುಗಿಸಿದ 'ಪ್ರಚಂಡ ಕುಳ್ಳ'

ಬೆಂಗಳೂರು, ಏ. 16 – ಹಿರಿಯ ನಟ, ನಿರ್ಮಾಪಕ ಹಾಗೂ ನಿರ್ದೇಶಕ ದ್ವಾರಕೀಶ್ ಅವರು ನಿಧನರಾಗಿದ್ದಾರೆ. ಐದು ದಶಕಗಳಿಗೂ ಹೆಚ್ಚು ಕಾಲ ಚಿತ್ರರಂಗಕ್ಕೆ ಕೊಡುಗೆ ನೀಡಿದ್ದ ಅವರು, ಹೃದಯಾಘಾತದಿಂದ ಕೊನೆಯುಸಿರೆಳೆದಿದ್ದಾರೆ. ಅವರಿಗೆ 81 ವರ್ಷ ವಯಸ್ಸಾಗಿತ್ತು.

ಕನ್ನಡ ಚಿತ್ರರಂಗದ ದಿಗ್ಗಜರಲ್ಲಿ ಒಬ್ಬರಾಗಿರುವ ಅವರು, 90ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ ಹಾಗೂ 50ಕ್ಕೂ ಹೆಚ್ಚು ಚಿತ್ರಗಳನ್ನು ನಿರ್ಮಿಸಿದ್ದಾರೆ ಮತ್ತು ನಿರ್ದೇಶನ ಮಾಡಿದ್ದಾರೆ.



**ನಟ, ನಿರ್ಮಾಪಕ, ನಿರ್ದೇಶಕ ದ್ವಾರಕೀಶ್ ಇನ್ನಿಲ್ಲ**

ಬಳಲಿಕೆಯಾಗುತ್ತಿದೆ ಎಂದು ತಮ್ಮ ಮಗನಿಗೆ ಬೆಳಿಗ್ಗೆ ಹೇಳಿದ್ದ ದ್ವಾರಕೀಶ್, 9 ಗಂಟೆ ವೇಳೆಗೆ ಎಚ್ಚರಿಸುವಂತೆ ತಿಳಿಸಿದ್ದರು. ಆ (5ನೇ ಪುಟಕ್ಕೆ)

# ರೈತರ ಹಿತ ಕಾಯಲು ಸಚಿವ ಎಸ್ಸೆಸ್ಸೆಂಗೆ ಮನವಿ

## ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಬೆಂಬಲ ಘೋಷಿಸಿದ ಜಿಲ್ಲಾ ರೈತ ಸಂಘ

ದಾವಣಗೆರೆ, ಏ. 16- ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ದಾವಣಗೆರೆ ಜಿಲ್ಲಾ ಘಟಕದ ವತಿಯಿಂದ ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಬೆಂಬಲ ನೀಡುವುದಾಗಿ ಸೇನೆಯ ಜಿಲ್ಲಾಧ್ಯಕ್ಷ ಹೊಳೆಸಿರಿಗೆರೆ ಹಾಳೂರು ನಾಗರಾಜ್ ತಿಳಿಸಿದರು.

ಸೋಮವಾರ ದಾವಣಗೆರೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರನ್ನು ಭೇಟಿ ಮಾಡಿದ ರೈತ ಸಂಘದ ಜಿಲ್ಲಾ ಪದಾಧಿಕಾರಿಗಳು, ಪ್ರಭಾ ಮಲ್ಲಿಕಾರ್ಜುನ್ ಅವರ ಗೆಲುವಿಗೆ ಶ್ರಮಿಸುವುದಾಗಿ ಹೇಳಿದರು.

ಅಪ್ಪರ್ ಭದ್ರಾ ಯೋಜನೆಗೆ ತುಂಗಾದಿಂದ ನೀರು ಲಿಫ್ಟ್ ಮಾಡಿಯೇ ನೀರು ಹರಿಸಬೇಕು. ಭದ್ರಾ ನೀರನ್ನು ಹರಿಸುವುದರಿಂದ ಅಚ್ಚುಕಟ್ಟಿನ ರೈತರಿಗೆ ಬಹಳ ತೊಂದರೆ ಆಗುತ್ತದೆ. ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ನೀವು ಚರ್ಚಿಸಬೇಕು. ಈ ಬಗ್ಗೆ ಈ ಹಿಂದಿನ ಬಿಜೆಪಿ ಸರ್ಕಾರಕ್ಕೆ ಎಷ್ಟೇ ಮನವಿ ಮಾಡಿದರೂ ನಮ್ಮ ಜಿಲ್ಲೆಯ ರೈತರ ಹಿತ ಕಾಪಾಡುವ ಕೆಲಸ ಮಾಡಿಲ್ಲ. ನೀವಾದರೂ ಭದ್ರಾ ಅಚ್ಚುಕಟ್ಟಿನ ರೈತರಿಗೆ ನೀರಿನ ತೊಂದರೆ ಆಗದಂತೆ ಸರ್ಕಾರ ಮಟ್ಟದಲ್ಲಿ ಹೋರಾಟ ಮಾಡಬೇಕು. ನೀರು ಎಲ್ಲರ



ಹಕ್ಕು. ಭದ್ರಾ ಮೇಲ್ದಂಡೆ ಯೋಜನೆಗೆ ನಮ್ಮ ವಿರೋಧ ಇಲ್ಲ. ಆದರೆ ನಮ್ಮ ಜಿಲ್ಲೆಯ ರೈತರನ್ನು ಬಲಿಕೊಟ್ಟು ಆ ಭಾಗಕ್ಕೆ ನೀರು ಹರಿಸುವ ತೀರ್ಮಾನಕ್ಕೆ ನಮ್ಮ ವಿರೋಧ ಇದೆ ಎಂದು ಅವರು ಹೇಳಿದರು.

ಹರಿಹರ ತಾಲ್ಲೂಕಿನಲ್ಲಿ ಭೈರನಪಾದ ಏತ ನೀರಾವರಿ ಯೋಜನೆ ಜಾರಿಗೊಂಡರೆ ಕೊನೆ ಭಾಗದ ರೈತರಿಗೆ ಅನುಕೂಲವಾಗಲಿದೆ. ಮತ್ತು ತುಂಗಭದ್ರಾ ನದಿಯಿಂದ ಹರಿಹರ ತಾಲ್ಲೂಕು ಸೇರಿದಂತೆ ಜಿಲ್ಲೆಯ ಕೆರೆ-ಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆ ಜಾರಿಗೊಳಿಸಬೇಕೆಂದು ಹಾಳೂರು ನಾಗರಾಜ್ ಅವರು ಸಚಿವರಿಗೆ ಮನವಿ ಮಾಡಿದರು.

ಇದಕ್ಕೆ ಪೂರಕವಾಗಿ ಸ್ಪಂದಿಸಿದ ಸಚಿವ ಮಲ್ಲಿಕಾರ್ಜುನ್ ಅವರು ಚುನಾವಣೆ ನಂತರ ಭದ್ರಾ ಅಚ್ಚುಕಟ್ಟಿನ ರೈತರ ಸಭೆ ನಡೆಸುವುದಾಗಿ ಮತ್ತು ಹರಿಹರ ತಾಲ್ಲೂಕಿನಲ್ಲಿ ಭೈರನಪಾದ ಏತ ನೀರಾವರಿ ಯೋಜನೆ ಜಾರಿಗೆ ಸರ್ಕಾರ ಮಟ್ಟದಲ್ಲಿ ಅನುದಾನ ಕೊಡಿಸುವುದಾಗಿ ಭರವಸೆ ನೀಡಿದರು.

ತುಂಗಭದ್ರಾ ನದಿಯಿಂದ ಕೊಂಡಜ್ಜಿ ಕೆರೆ ಸೇರಿದಂತೆ ದಾವಣಗೆರೆ ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಶೀಘ್ರ ಜಾರಿಗೆ ಬರಲಿದೆ.

ದೇವರ ಬೆಳಕೆರೆ ಪಿಕಪ್ ಡ್ಯಾಂ ಕ್ರಸ್ಟ್ ಗೇಟ್ ಸಮಸ್ಯೆಯನ್ನೂ ಬಗೆಹರಿಸುತ್ತೇನೆಂದು (5ನೇ ಪುಟಕ್ಕೆ)

# ನಗರದಲ್ಲಿ ನಾಳೆ, ನಾಡಿದ್ದು ಸಿಇಟಿ ಪರೀಕ್ಷೆ

ದಾವಣಗೆರೆ, ಏ.16- ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ 2024 ನೇ ಸಾಲಿನ ಇಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶು ಸಂಗೋಪನಾ, ಫಾರ್ಮಸಿ, ಬಿ.ಎಸ್ಸಿ ನರ್ಸಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಾಡಿದ್ದು ದಿನಾಂಕ 18, 19 ರಂದು ಸಿಇಟಿ ಪರೀಕ್ಷೆ ನಡೆಯಲಿದ್ದು, ನಗರದ 23 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದು ಅಪರ ಜಿಲ್ಲಾಧಿಕಾರಿ ಸೈಯ್ಯದ್ ಆಫ್ರಿನ್ ಭಾನು ಎಸ್. ಬಳ್ಳಾರಿ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ತುಂಗಭದ್ರಾ ಸಭಾಂಗಣದಲ್ಲಿ ಪರೀಕ್ಷಾ ಪೂರ್ವಭಾವಿ ಸಿದ್ಧತಾ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದಿನಾಂಕ 18 ರ ಗುರುವಾರ ಬೆಳಗ್ಗೆ 10.30 ರಿಂದ 11.50 ರ ವರೆಗೆ 60 ಅಂಕಗಳಿಗೆ ಜೀವಶಾಸ್ತ್ರ, ಮಧ್ಯಾಹ್ನ 2.30 ರಿಂದ ಮಧ್ಯಾಹ್ನ 3.50 ರವರೆಗೆ 60 ಅಂಕಗಳಿಗೆ



**ದಾವಣಗೆರೆಯ 23 ಕೇಂದ್ರಗಳಲ್ಲಿ 12,289 ವಿದ್ಯಾರ್ಥಿಗಳು**

ಗಣಿತ ಪರೀಕ್ಷೆ ನಡೆಯಲಿದೆ. ದಿನಾಂಕ 19 ರ ಶುಕ್ರವಾರ ಬೆಳಗ್ಗೆ 10.30 ರಿಂದ 11.50 ರ ವರೆಗೆ 60 ಅಂಕಗಳಿಗೆ ಭೌತಶಾಸ್ತ್ರ, ಮಧ್ಯಾಹ್ನ 2.30 ರಿಂದ 3.50 ರ ವರೆಗೆ 60 ಅಂಕಗಳಿಗೆ ರಸಾಯನಶಾಸ್ತ್ರ ವಿಷಯದ ಪರೀಕ್ಷೆಗಳು ನಡೆಯಲಿವೆ.

**ಪರೀಕ್ಷಾ ಕೇಂದ್ರಗಳ ವಿವರ :** ನಗರದ 23 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, ಡಿಆರ್‌ಎಂ ಸೈನ್ಸ್ ಪಿಯು ಕಾಲೇಜು, ಎವಿಕೆ ಬಾಲಕಿಯರ ಪದವಿ ಪೂರ್ವ ಕಾಲೇಜು, ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು, ಸರ್ಕಾರಿ ಎಕ್ಸ್ ಮುನ್ಸಿಪಲ್ ಪಿಯು ಕಾಲೇಜು, ಎಆರ್‌ಜಿ ಪಿ.ಯು ಕಲಾ ಮತ್ತು ವಾಣಿಜ್ಯ, ರಾಜನಹಳ್ಳಿ ಸೀತಮ್ಮ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು, ಶ್ರೀ ತರಳಬಾಳು ಜಗದ್ಗುರು ಸಂಯುಕ್ತ ಪದವಿ ಪೂರ್ವ ಕಾಲೇಜು, ವಿಶ್ವಚೇತನ ಪಿಯು ಕಾಲೇಜು, ಅಥಣಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು, ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಪಿಯು ಸೈನ್ಸ್ ಕಾಲೇಜು, ಸೆಂಟ್ ಜಾನ್ ಪಿಯು ಕಾಲೇಜು, ಶ್ರೀ ಸಿದ್ಧಗಂಗಾ ಪಿಯು ಕಾಲೇಜು, ರಾಘವೇಂದ್ರ ಹೈಟೆಕ್ ಪಿಯು ಕಾಲೇಜು, ಟಿಎಂಸಿ ಮತ್ತು ಟಿಎಂ ಮೆಮೋ ಪಿಯು ಕಾಲೇಜು, ಸೆಂಟ್ ಪಾಲ್ಸ್ ಪಿಯು ಕಾಲೇಜು, ಚಾಣಕ್ಯ ಪಿಯು ಕಾಲೇಜು, ಲಲಿತಾ ಪಿಯು ಕಾಲೇಜು, ಸರ್‌ಎಂವಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಆನಂದ್ ಪಿಯು ಕಾಲೇಜು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಎಸ್‌ಬಿಸಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ ಇಲ್ಲಿ (5ನೇ ಪುಟಕ್ಕೆ)

# ಗಾಯತ್ರಿ ಸಿದ್ದೇಶ್ವರ ಜನ್ಮದಿನ ಆಚರಣೆ

## ಮಾಜಿ ಸಿಎಂ ಬಿಎಸ್‌ವೈ ಭಾಗಿ, ಗೋ ಪೂಜೆ ಸಲ್ಲಿಸಿದ ಗಾಯತ್ರಿ ಸಿದ್ದೇಶ್ವರ



ದಾವಣಗೆರೆ, ಏ. 16 - ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರ ಜನ್ಮದಿನವನ್ನು ಸರಳವಾಗಿ ಆಚರಿಸಲಾಯಿತು.

ನಗರದ ಜಿಎಂಐಟಿ ಅತಿಥಿ ಗೃಹದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಸಂಸದ ಜಿ.ಎಂ.ಸಿದ್ದೇಶ್ವರ ಸಮ್ಮುಖದಲ್ಲಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಕೇಕ್ ಕತ್ತರಿಸಿ ಎಲ್ಲರಿಗೂ ಸಿಹಿ ತಿನ್ನಿಸುವ ಮೂಲಕ ಜನ್ಮದಿನ ಆಚರಿಸಿಕೊಂಡರು.

ಈ ವೇಳೆ ಮಾತನಾಡಿದ ಯಡಿಯೂರಪ್ಪ ಅವರು, ಸಹೋದರಿ ಗಾಯತ್ರಿ ಸಿದ್ದೇಶ್ವರ ಅವರಿಗೆ ದೇವರು ಆರೋಗ್ಯ, ಆಯುಷ್ಯ ನೀಡಲಿ ಎಂದು ಶುಭ ಹಾರೈಸಿ, ಚುನಾವಣೆಯಲ್ಲಿ ಗೆಲುವು ಸಾಧಿಸುವಂತೆ ಆಶೀರ್ವದಿಸಿದರು.

ಆವರಗೆರೆ ಬಳಿಯ ಗೋ ಶಾಲೆಗೆ ಭೇಟಿ ನೀಡಿದ ಗಾಯತ್ರಿ ಸಿದ್ದೇಶ್ವರ ಅವರು ಗೋ ಮಾತೆಗೆ ಮೇವು ತಿನ್ನಿಸಿ ಪೂಜೆ ಸಲ್ಲಿಸಿದರು.

ನಂತರ ಪುಟ್ಟರಾಜ ಗವಾಯಿಗಳ ಪುಣ್ಯಾಶ್ರಮಕ್ಕೆ ಭೇಟಿ ನೀಡಿ ಗವಾಯಿಗಳ ಗದ್ದುಗೆ ಪೂಜೆ ಸಲ್ಲಿಸಿ, ಅಂಧ ಮಕ್ಕಳಿಗೆ ಸಿಹಿ ವಿತರಿಸಿದರು. ಆವರಗೆರೆಯ ಜೈನ ದೇವಾಲಯಕ್ಕೂ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಮುರುಗೇಶ್ ನಿರಾಣಿ, ಶಾಸಕ ಬಿ.ಪಿ.ಹರೀಶ್, ಮಾಜಿ ಶಾಸಕ ಎಚ್.ಎಸ್.ಶಿವಶಂಕರ್, ದೂಡಾ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ಮುಖಂಡ ಜಿ.ಎಸ್. ಅನಿತ್ ಕುಮಾರ್, ಪುತ್ರಿ ಜಿ.ಎಸ್.ಅಶ್ವಿನಿ, ಗ್ಯಾರಳ್ಳಿ ಶಿವಯೋಗಿ, ಗೌತಮ್ ಜೈನ್ ಇದ್ದರು.

## ಯುಪಿಎಸ್‌ಸಿ: ಸೌಭಾಗ್ಯಗೆ ರ್‍ಯಾಂಕ್

(3ನೇ ಪುಟದಿಂದ) ಯಶಸ್ವಿಯಾಗಿದ್ದಾರೆ.

ದಾವಣಗೆರೆಯ ಸಿದ್ಧಗಂಗಾ ಪಿಯು ಸೈನ್ಸ್ ಕಾಲೇಜಿನಲ್ಲಿ ಶೇ. 98 ಅಂಕ ಗಳಿಸಿದ್ದರು. ನಂತರ 2023ರಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾಲಯದಿಂದ ಬಿಎಸ್.ಸಿ ಕೃಷಿ ಪದವಿ ಪೂರೈಸಿದ್ದರು.

ಈ ಬಗ್ಗೆ ಮಾತನಾಡಿರುವ ಸೌಭಾಗ್ಯ, ಯಾವುದೇ ಕೇಂದ್ರದಲ್ಲಿ ಕೋಚಿಂಗ್ ಪಡೆದಿರಲಿಲ್ಲ. ಆನ್‌ಲೈನ್ ಮಾಕ್ ಟೆಸ್ಟ್ ಸರಣಿ ಅಟೆಂಡ್ ಮಾಡಿದ್ದೆ ಅಷ್ಟೆ. ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಬೋಧಕಿ ಎಂ. ಅಶ್ವಿನಿ ಅವರು ನನ್ನನ್ನು ತಮ್ಮ ಮನೆಯಲ್ಲೇ ಇಟ್ಟುಕೊಂಡು ಪರೀಕ್ಷೆಗೆ ಸಿದ್ಧತೆ ನಡೆಸಲು ಪ್ರೋತ್ಸಾಹ ನೀಡಿದರು. ಪರೀಕ್ಷೆ ತಯಾರಿಗೆ ಅವರೇ ಎಲ್ಲ ರೀತಿಯ ಮಾರ್ಗದರ್ಶನ ನೀಡಿದರು ಎಂದು ತಿಳಿಸಿದ್ದಾರೆ. ಯು.ಪಿ.ಎಸ್.ಸಿ. ಪರೀಕ್ಷೆಯಲ್ಲಿ ಈಗ ಗಳಿಸಿರುವ ರ್‍ಯಾಂಕಿಂಗ್‌ಗೆ ಬಹುಶಃ ಐ.ಪಿ.ಎಸ್. ಸಿಗಬಹುದು. ಐ.ಎ.ಎಸ್. ಹಂತದ ರ್‍ಯಾಂಕ್ ಪಡೆಯಲು ಮತ್ತೆ ಪ್ರಯತ್ನ ನಡೆಸುತ್ತೇನೆ ಎಂದವರು ಹೇಳಿದ್ದಾರೆ.

# ಆಂತರಿಕ ಸಮೀಕ್ಷೆಯಿಂದ ಪ್ರಭಾ ಗೆಲುವು ಖಚಿತ

## 14ನೇ ವಾರ್ಡಿನ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಸಲೀಂ ಅಹ್ಮದ್ ವಿಶ್ವಾಸ



ದಾವಣಗೆರೆ, ಏ.16- ಪಕ್ಷದ ಆಂತರಿಕ ಸಮೀಕ್ಷೆಯನ್ನು ಗಮನಿಸಿದರೆ ಡಾ. ಪ್ರಭಾ ಮಲ್ಲಿಕಾರ್ಜುನ್ ಗೆಲ್ಲುವುದು ಶತಸಿದ್ಧ ಎಂದು ವಿಧಾನ ಪರಿಷತ್ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹಮದ್ ಹೇಳಿದರು.

ನಗರದ ಕಲ್ಲೇಶ್ವರ ರೈಸ್ ಮಿಲ್‌ನಲ್ಲಿ ಸೋಮವಾರ ನಡೆದ 14ನೇ ವಾರ್ಡಿನ ಕಾರ್ಯಕರ್ತರ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಡಾ. ಪ್ರಭಾ ಅವರು ಮಾಡಿದ ನಿಸ್ವಾರ್ಥ ಸೇವೆ ಮತ್ತು ಜನರ ಪ್ರೀತಿಯಿಂದ ಅವರ ಗೆಲುವು ಖಚಿತವಾಗಿದೆ ಎಂದು ಹೇಳಿದರು.

ರಾಜ್ಯಕ್ಕೆ ಸೂಕ್ತ ಪರಿಹಾರ ನೀಡದ ಕೇಂದ್ರ ಸರ್ಕಾರ ಮತ ಕೇಳುವ ಹಕ್ಕನ್ನು ಕಳೆದುಕೊಂಡಿದೆ ಮತ್ತು ಬರ ಪರಿಹಾರ ವಿಷಯದಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ತಾರತಮ್ಯ ಧೋರಣೆ ತೋರುತ್ತಿದೆ ದೂರಿದರು.

ರಾಜ್ಯಕ್ಕೆ ಹಣ ನೀಡಲು ಕೇಂದ್ರ ಸರ್ಕಾರ ರಾಜಕೀಯ ಮಾಡುತ್ತಿದೆ. ಕೇಂದ್ರ ಸಚಿವರುಗಳಾದ ಅಮಿತ್ ಷಾ, ನಿರ್ಮಲಾ ಸೀತಾರಾಮನ್ ಸುಳ್ಳು ಹೇಳುತ್ತಾ ರಾಜ್ಯಕ್ಕೆ ತಾರತಮ್ಯ ಧೋರಣೆ ತೋರುತ್ತಿದ್ದಾರೆ. ಇಂತಹ 10 ವರ್ಷದ ಮೋದಿ ಆಡಳಿತಕ್ಕೆ ಬೇಸತ್ತ ಜನರು ಸರ್ಕಾರ ಬದಲಿಸಲಿದ್ದಾರೆ ಎಂದು ಹೇಳಿದರು.

ಶಾಸಕ ಶಾಮನೂರು ಶಿವಶಂಕರಪ್ಪ ಮತ್ತು ಎಸ್.ಎಸ್.ಮಲ್ಲಿಕಾರ್ಜುನ್ ಮಾಡಿದ ಅಭಿವೃದ್ಧಿ ಕಾರ್ಯಗಳು ಪ್ರಭಾ ಅವರ ಗೆಲುವಿಗೆ ಸಹಾಯಕವಾಗಲಿವೆ ಎಂದು ಹೇಳಿದರು.

ಶಾಸಕ ಶಾಮನೂರು ಶಿವಶಂಕರಪ್ಪ ಮಾತನಾಡಿ, ನಮ್ಮ ಸರ್ಕಾರ ನುಡಿದಂತೆ ನಡೆದು ಐದು ಗ್ಯಾರಂಟಿಗಳನ್ನು ಬಡವರಿಗೆ ತಲುಪಿಸಿದೆ. ಮಹಿಳೆಯರಿಗೆ ಹೆಚ್ಚಿನ ಸ್ಥಾನಮಾನ ಒದಗಿಸಿದೆ. ಆದ್ದರಿಂದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಗೆಲ್ಲಲಿದ್ದಾರೆ ಎಂದು ತಿಳಿಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್, ಮುಸ್ಲಿಂ ಸಮಾಜದ ಅಧ್ಯಕ್ಷ ದಾದು ಸೇಟ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯ್ಯೂಬ್ ಪೈಲ್ವಾನ್, ಪಾಲಿಕೆ ಸದಸ್ಯರಾದ ಕೆ. ಚಮನ್‌ಸಾಬ್, ಎ.ಬಿ. ರಹೀಂ, ಜಾಕೀರ್ ಅಲಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಮುಸ್ಲಿಂ ಧರ್ಮ ಗುರು ಇಬ್ರಾಹಿಂ ಸಖಾಫಿ, ಜಯಪ್ರಕಾಶ್ ಮತ್ತು ಇತರರು ಇದ್ದರು.

## 'ಕಲೆಗೆ ಕಣ್ಣಿತ್ತ ಪೂಜ್ಯರು' ಕವಿ ಗೋಷ್ಠಿಗೆ ಕವನ ಆಹ್ವಾನ

ದಾವಣಗೆರೆ, ಏ. 16- ಡಾ. ಪಂಡಿತ ಪುಟ್ಟರಾಜ ಸೇವಾ ಸಮಿತಿ (ಗದಗ) ಅರ್ಪಿಸುವ, ಹಾನಗಲ್ ಗುರು ಕುಮಾರ ಮಹಾಸ್ವಾಮಿಗಳ, ಗಾನಯೋಗಿ ಪಂ. ಪಂಚಾಕ್ಷರಿ ಗವಾಯಿಗಳವರ, ಡಾ. ಪಂ. ಪುಟ್ಟರಾಜ ಶಿವಯೋಗಿ ಕವಿ ಗವಾಯಿಗಳವರ ಕುರಿತಾಗಿ ರಚಿಸಿದ ಕಲೆಗೆ ಕಣ್ಣಿತ್ತ ಪೂಜ್ಯರು 13 ನೇ ರಾಜ್ಯ ಮಟ್ಟದ ಕವಿಗೋಷ್ಠಿಯು ಬರುವ ಮೇ 12ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಗರದ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಏರ್ಪಡಿಸಲಾಗಿದೆ.

ಪೂಜ್ಯತ್ರಯರ ಕುರಿತಾಗಿ ರಚಿಸಿದ ಸ್ವರಚಿತ ಕವನ ವಾಚನ ಮಾಡಲು ಆಸಕ್ತ ಕವಿಗಳು ಹೆಸರು ನೋಂದಾಯಿಸಿಕೊಳ್ಳಬಹುದು.

ಕವನವನ್ನು ಶ್ರೀಮತಿ ವಾಣಿ ಬಸವರಾಜ (99020 52121 ಅಥವಾ 98867 17732) ಅವರ ವಾಟ್ಸಾಪ್ ನಂಬರ್‌ಗೆ ಕಳಿಸಿಕೊಡಬೇಕು. ಹೆಸರು ನೋಂದಾಯಿಸಿಕೊಳ್ಳಲು ಇದೇ ದಿನಾಂಕ 30 ಆಗಿದೆ ಎಂದು ಡಾ. ಪಂ. ಪುಟ್ಟರಾಜ ಸೇವಾ ಸಮಿತಿ ರಾಜ್ಯ ಸಂಘಟನಾ ಕಾರ್ಯದರ್ಶಿ ಸಂಗೀತ ಶಿಕ್ಷಕ ಶಿವಬಸಯ್ಯ ಪಂ. ಚರಂತಿಮಠ, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಸೌಮ್ಯ ಸತೀಶ್ ಧಾರವಾಡ ತಿಳಿಸಿದ್ದಾರೆ.

## ಕೊಕ್ಕನೂರು : ಇಂದು ಹನುಮಪ್ಪನ ತೇರು



ಮಲೇಬೆನ್ನೂರು ಸಮೀಪದ ಕೊಕ್ಕನೂರು ಗ್ರಾಮದ ಆರಾಧ್ಯ ದೈವ ಶ್ರೀ ಆಂಜನೇಯ ಸ್ವಾಮಿಯ ಬ್ರಹ್ಮ ರಥೋತ್ಸವ ಹಾಗೂ ಮಹಾ ರಥೋತ್ಸವವು ಇಂದು ಜರುಗಲಿದೆ.

ಇಂದು ಬೆಳಿಗ್ಗೆ 10.45 ಕ್ಕೆ ಸಾಮೂಹಿಕ ವಿವಾಹಗಳು ನೆರವೇರಲಿದ್ದು, ಮಧ್ಯಾಹ್ನ 12.30ಕ್ಕೆ ಶ್ರೀ ಆಂಜನೇಯ ಸ್ವಾಮಿಯ ಬ್ರಹ್ಮರಥೋತ್ಸವ ನಡೆಯಲಿವೆ.

ಇದೇ ದಿನ ತಡರಾತ್ರಿ (ಗುರುವಾರ) ಬೆಳಗಿನ ಜಾವ ಶ್ರೀ ಆಂಜನೇಯ ಸ್ವಾಮಿಯ ಮಹಾರಥೋತ್ಸವ ಜರುಗಲಿದೆ.

## ನಗರದಲ್ಲಿ ನಾಳೆ, ನಾಡಿದ್ದು ಸಿಇಟಿ ಪರೀಕ್ಷೆ

(3ನೇ ಪುಟದಿಂದ) ಸಿಇಟಿ ಪರೀಕ್ಷೆ ನಡೆಯಲಿದೆ.

**ಪೆನ್ ಮತ್ತು ವಸ್ತ್ರ ಸಂಹಿತೆ;** ಓಎಂಆರ್ ಸೀಟ್‌ನಲ್ಲಿ ಮಾರ್ಕ್ ಮಾಡುವುದರಿಂದ ಕಪ್ಪು ಮತ್ತು ನೀಲಿ ಬಾಲ್‌ಪೆನ್ ಮಾತ್ರ ಉಪಯೋಗಿಸಬೇಕು. ಕೇಂದ್ರದೊಳಗೆ ಬ್ಲೇಡ್, ವೈಟ್ನರ್ ತೆಗೆದುಕೊಂಡು ಹೋಗುವಂತಿಲ್ಲ. ಮೊಬೈಲ್, ಬ್ಲೂಟೂತ್ ಹಾಗೂ ಯಾವುದೇ ಎಲೆಕ್ಟ್ರಾನಿಕ್ಸ್ ವಸ್ತುಗಳನ್ನು ಕೇಂದ್ರದೊಳಗೆ ತೆಗೆದುಕೊಂಡು ಹೋಗುವಂತಿಲ್ಲ. ಪೂರ್ಣ ತೋಳು ಇರುವ ಶರ್ಟ್‌ಗಳನ್ನು ಹಾಕದೇ ಸ್ಲ್ಯಾಗ್ ಧರಿಸಬೇಕು, ಮಹಿಳೆಯರು ಸಹ ಪೂರ್ಣತೋಳಿನ ಉಡುಪು ಧರಿಸಬಾರದು. ಧರಿಸಿದ್ದಲ್ಲಿ ಪರೀಕ್ಷೆ ನಡೆಯುವುದಕ್ಕಿಂತ ಮುಂಚಿತವಾಗಿ ತಪಾಸಣೆ ಮಾಡಿ ಮಡಿಚಿಕೊಳ್ಳುವಂತೆ ಸೂಚನೆ ನೀಡಬೇಕು. ಸಭೆಯಲ್ಲಿ ಶಾಲಾ ಶಿಕ್ಷಣ ಇಲಾಖೆ ಪದವಿ ಪೂರ್ವ ಉಪನಿರ್ದೇಶಕ ಕರಿಸಿದ್ದಪ್ಪ ಹಾಗೂ ವಿವಿಧ ಕಾಲೇಜುಗಳ ಪ್ರಾಂಶುಪಾಲರು ಉಪಸ್ಥಿತರಿದ್ದರು.

# ಪಕ್ಷೇತರನಾಗಿ ಕಣಕ್ಕಿಳಿದು ನಗರದ ಅಭಿವೃದ್ಧಿಗೆ ಹಲವು ಯೋಜನೆ : ಜಿ.ಬಿ. ವಿನಯ್ ಕುಮಾರ್



ದಾವಣಗೆರೆ, ಏ. 16- ಪಕ್ಷೇತರನಾಗಿ ಕಣಕ್ಕಿಳಿದಿರುವ ನಾನು ದಾವಣಗೆರೆ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ಹಾಕಿಕೊಂಡಿದ್ದೇನೆ. ಬಡ ಮಕ್ಕಳು, ವಿದ್ಯಾವಂತರು, ಹಿರಿಯರು ಸೇರಿದಂತೆ ಎಲ್ಲಾ ವರ್ಗದವರಿಗೆ ನೆರವು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸುತ್ತೇನೆ. ನೀವೆಲ್ಲರೂ ಬೆಂಬಲಿಸಿ. ಸ್ವಾಭಿಮಾನದ ಹೋರಾಟಕ್ಕೆ ಮನ್ನಣೆ ನೀಡಿ ಮತ ನೀಡಿ ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್‌ಕುಮಾರ್ ಮನವಿ ಮಾಡಿದರು. ನಗರದ ಪಾರ್ಕ್, ಬೀದಿ ಬದಿ ವ್ಯಾಪಾರಿಗಳು, ಮಾರುಕಟ್ಟೆ ವರ್ತಕರು, ಪಾರ್ಕ್, ಕಾಫಿ ಬಾರ್‌ಗಳು, ಜನಸಂದಣಿ ಪ್ರದೇಶಗಳಲ್ಲಿ ಜನರನ್ನು ಭೇಟಿಯಾದ ವಿನಯ್ ಕುಮಾರ್ ಅವರು ಪಕ್ಷೇತರರಾಗಿ ಕಣಕ್ಕಿಳಿಯುತ್ತಿರುವುದು ಯಾಕೆ ಎಂಬ ಕುರಿತಂತೆ ವಿನಿಮಯ ಮಾಡಿಕೊಂಡರು.

ನಂತರ ಶ್ರೀಮತಿ ಗಂಗೂಬಾಯಿ ಹಾನಗಲ್ ಅವರ ಉದ್ಯಾನವನದಲ್ಲಿ ಬೆಳಗಿನ ವಾಯುವಿಹಾರ ಮಾಡುತ್ತಿದ್ದ ಅಧಿಕಾರಿಗಳನ್ನು ಭೇಟಿ ಮಾಡಿ ಬೆಂಬಲಿಸುವಂತೆ ಕೋರಿದರು.

## ಚಿರಸ್ತಹಳ್ಳಿ : ಪ್ರಭಾರಿಂದ ಮತಯಾಚನೆ



ಹರಪನಹಳ್ಳಿ, ಏ. 16- ಚಿರಸ್ತಹಳ್ಳಿ ಗ್ರಾ.ಪಂ.ವ್ಯಾಪ್ತಿಯಲ್ಲಿ ಅಂಬೇಡ್ಕರ್ ಜನ್ಮದಿನಾಚರಣೆ ಪ್ರಯುಕ್ತ ಅಂಬೇಡ್ಕರ್ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದ ನಂತರ ಪ್ರಭಾ ಮಲ್ಲಿಕಾರ್ಜುನ್ ಅವರು ಮತಯಾಚನೆ ಮಾಡಿದರು. ಶಾಸಕರಾದ ಶ್ರೀಮತಿ ಲತಾ ಮಲ್ಲಿಕಾರ್ಜುನ್, ಮುಖಂಡ ಮಲ್ಲಿಕಾರ್ಜುನ ಸ್ವಾಮಿ ಕಲ್ಮಠ ಮತ್ತಿತರರು ಉಪಸ್ಥಿತರಿದ್ದರು.

## ಶ್ರೀ ರಾಮನವಮಿ, ಶ್ರೀಮಹಾವೀರ ಜಯಂತಿ ಪ್ರಯುಕ್ತ ಪ್ರಾಣಿ ವಧೆ ನಿಷೇಧ

ದಾವಣಗೆರೆ, ಏ. 16 - ನಾಳೆ ದಿನಾಂಕ 17 ರ ಬುಧವಾರ ಶ್ರೀ ರಾಮನವಮಿ ಹಾಗೂ ಇದೇ ದಿನಾಂಕ 21 ರಂದು ನಡೆಯುವ ಶ್ರೀ ಮಹಾವೀರ ಜಯಂತಿ ಪ್ರಯುಕ್ತ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರಾಣಿ ವಧೆಯನ್ನು ನಿಷೇಧಿಸಲಾಗಿದೆ ಎಂದು ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ತಿಳಿಸಿದ್ದಾರೆ. ಈ ದಿನಗಳಂದು ಮಾಂಸ ಮಾರಾಟ ಮಾಡಬಾರದು. ತಪ್ಪಿದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

## ಯುಪಿಎಸ್‌ಸಿ : ಆದಿತ್ಯ ಮೊದಲ ಸ್ಥಾನ

(3ನೇ ಪುಟದಿಂದ) ಹಾಗೂ 352 ಮಹಿಳೆಯರು ಸೇರಿದಂತೆ 1,016 ಅಭ್ಯರ್ಥಿಗಳು ಈ ಬಾರಿ ಯು.ಪಿ.ಎಸ್.ಸಿ. ಪರೀಕ್ಷೆಯಲ್ಲಿ ಅರ್ಹತೆ ಪಡೆದುಕೊಂಡಿದ್ದಾರೆ. ಮೊದಲ ಐದು ಸ್ಥಾನ ಪಡೆದವರಲ್ಲಿ ಮೂವರು ಪುರುಷರಾಗಿದ್ದಾರೆ.

ಪಿ.ಕೆ. ಸಿದ್ದಾರ್ಥ ರಾಮಕುಮಾರ್ ಹಾಗೂ ರುಹಾನಿ ಅವರು ಕ್ರಮವಾಗಿ ನಾಲ್ಕು ಹಾಗೂ ಐದನೇ ಸ್ಥಾನದಲ್ಲಿದ್ದಾರೆ. ಇಂಜಿನಿಯರಿಂಗ್, ಮಾನವೀಯ, ವಿಜ್ಞಾನ, ವಾಣಿಜ್ಯ, ವಾಸ್ತುಶಿಲ್ಪ ಹಾಗೂ ಕಾನೂನು ಸೇರಿದಂತೆ ಹಲವಾರು ವಲಯಗಳ ವಿದ್ಯಾರ್ಥಿಗಳು ಮೊದಲ 25 ಸ್ಥಾನಗಳಲ್ಲಿದ್ದಾರೆ. ಆಯ್ಕೆಯಾದವರ ಪಟ್ಟಿಯಲ್ಲಿ 30 ದಿವ್ಯಾಂಗರೂ ಸೇರಿದ್ದಾರೆ.

## ಮೋದಿ ಎದುರು ಗ್ಯಾರಂಟಿ ಗೌಣ

(3ನೇ ಪುಟದಿಂದ) ಅಂತ್ಯಕ್ರಿಯೆ ನಡೆಸಲು ಜಾಗವನ್ನೂ ಕೊಡಲಿಲ್ಲ. ಆದರೆ, ಮೋದಿ ಸರ್ಕಾರ ಅಂಬೇಡ್ಕರ್ ಹುಟ್ಟಿದ ಊರು, ದೀಕ್ಷೆ ಪಡೆದ ಜಾಗ, ಲಂಡನ್‌ನಲ್ಲಿ ಅವರು ಅಧ್ಯಯನ ಮಾಡಿದ ಜಾಗಗಳನ್ನು ಅಭಿವೃದ್ಧಿ ಮಾಡಿದೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ್, ಪರಿಷತ್ ಸದಸ್ಯ ಎನ್.ರವಿಕುಮಾರ್, ಮಾಜಿ ಸಚಿವ ಮುರುಗೇಶ್ ನಿರಾಣಿ, ಜೆಡಿಎಸ್ ನಾಯಕ ಹೆಚ್.ಎಸ್. ಶಿವಶಂಕರ್, ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್, ಬಿಜೆಪಿ ಮುಖಂಡರಾದ ಯಶವಂತರಾವ್ ಜಾಧವ್, ಗಿರೀಶ್ ಉಪ್ಪಾರ್, ಕೋಳೇನಹಳ್ಳಿ ಸತೀಶ್ ಮತ್ತಿತರರು ಉಪಸ್ಥಿತರಿದ್ದರು.

## 'ಆಪ್ತಮಿತ್ರ' ಸಂಭ್ರಮೋತ್ಸವದಲ್ಲಿ ಭಾಗವಹಿಸಿದ್ದ ದ್ವಾರಕೀಶ್



ದಾವಣಗೆರೆ, ಏ. 16- ಕನ್ನಡ ಚಿತ್ರ ರಂಗದ ಜನಪ್ರಿಯ ನಟ, ನಿರ್ದೇಶಕ, ನಿರ್ಮಾಪಕ ದ್ವಾರಕೀಶ್ ಅವರ ನಿಧನಕ್ಕೆ ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷರೂ, ವಿಷ್ಣುವರ್ಧನ್ ಅಭಿಮಾನಿಗಳ ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜ್ ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

2004ರಲ್ಲಿ ದ್ವಾರಕೀಶ್ ಅವರು ನಿರ್ಮಿಸಿದ್ದ ವಿಷ್ಣುವರ್ಧನ್ ಅಭಿನಯದ 'ಆಪ್ತಮಿತ್ರ' ಚಿತ್ರವು ನಗರದ ತ್ರಿಶೂಲ್ ಚಿತ್ರಮಂದಿರದಲ್ಲಿ 200 ದಿನ ಪ್ರದರ್ಶನ ಕಂಡ ಸಂದರ್ಭದಲ್ಲಿ ನಡೆದ ಸಂಭ್ರಮೋತ್ಸವ ಕಾರ್ಯಕ್ರಮದಲ್ಲಿ ದ್ವಾರಕೀಶ್ ಅವರು ಭಾಗವಹಿಸಿದ್ದನ್ನು ಗೋವಿಂದರಾಜ್ ಸ್ಮರಿಸಿದ್ದಾರೆ.

ದ್ವಾರಕೀಶ್ ಅವರಲ್ಲದೇ, ವಿಷ್ಣುವರ್ಧನ್, ರಮೇಶ್ ಅರವಿಂದ್, ಪ್ರೇಮಾ ಅವರುಗಳಲ್ಲದೇ, ಸಚಿವ ಶಾಮನೂರು ಮಲ್ಲಿಕಾರ್ಜುನ್ ಸೇರಿದಂತೆ, ಅನೇಕ ಗಣ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ದ್ವಾರಕೀಶ್ ಅವರು ಆಡಿದ ಮಾತುಗಳನ್ನು ಗೋವಿಂದರಾಜ್ ಮೆಲುಕು ಹಾಕಿದ್ದಾರೆ.

## ಹೊಳೆಸಿರಿಗೆರೆಯಲ್ಲಿ ಇಂದು ಆಂಜನೇಯ ಸ್ವಾಮಿ ರಥೋತ್ಸವ



ಮಲೇಬೆನ್ನೂರು ಸಮೀಪದ ಹೊಳೆಸಿರಿಗೆರೆ ಗ್ರಾಮದ ಶ್ರೀ ಆಂಜನೇಯ ಸ್ವಾಮಿಯ ಜಾತ್ರಾ ಕಾರ್ಯಕ್ರಮಗಳು ಇಂದು ಮತ್ತು ನಾಳೆ ಜರುಗಲಿವೆ.

ಇಂದು ಬೆಳಿಗ್ಗೆ 10.15ಕ್ಕೆ ಶ್ರೀ ಆಂಜನೇಯ ಸ್ವಾಮಿ ರಥೋತ್ಸವ ಜರುಗಲಿದ್ದು, ಮಧ್ಯಾಹ್ನ 1 ಗಂಟೆಗೆ ಸಾಮೂಹಿಕ ವಿವಾಹ, ಜವಳ, ಉರುಳು ಸೇವೆ ಸೇರಿದಂತೆ ಇತ್ಯಾದಿ ಸೇವಾ ಕಾರ್ಯಕ್ರಮಗಳು ನಡೆಯಲಿವೆ. ಸಾಯಂಕಾಲ 4 ಗಂಟೆಗೆ ಸ್ವಾಮಿಯು ಬೇಟೆಯಾಡಲು ಹೊರಡುವುದು.

## ಕೆರೆ ಯೋಜನೆ ಕಾಂಗ್ರೆಸ್ ಸಾಧನೆ

(3ನೇ ಪುಟದಿಂದ) ಕೆಪಿಸಿಸಿ ಎಸ್.ಟಿ. ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ, ಪ್ರಧಾನ ಕಾರ್ಯದರ್ಶಿ ಎಂ.ಡಿ. ಕೀರ್ತಿ ಕುಮಾರ್, ಕೆಪಿಸಿಸಿ ಸದಸ್ಯ ಕಲ್ಲೇಶ್ ಪಟೇಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹ್ಮದ್, ಉದಯಶಂಕರ್ ಒಡೆಯರ್, ಬಿ.ಮಹೇಶ್ವರಪ್ಪ, ಸುರೇಶ್ ಗೌಡ್ರು, ಶಿವನಗೌಡ, ಪಲ್ಲಾಗಟ್ಟೆ ಶೇಖರಪ್ಪ. ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

## ವಿಕಾಸ ತರಂಗಿಣಿಯಿಂದ ಇಂದು ಶ್ರೀ ರಾಮನವಮಿ ಪ್ರಸಾದ ವಿತರಣೆ

ವಿಕಾಸ ತರಂಗಿಣಿ ವತಿಯಿಂದ ಇಂದು ಶ್ರೀ ರಾಮನವಮಿ ಪ್ರಯುಕ್ತ ದಿ. ಸುಶೀಲಮ್ಮ ಚನ್ನವೀರಪ್ಪ ಎನ್.ಕೆ. ಇವರ ಜ್ಞಾಪಕಾರ್ಥವಾಗಿ ಕುಟುಂಬ ವರ್ಗದವರಿಂದ ಪ್ರಸಾದ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

## ಹೊನ್ನಾಳಿ ತಾಲ್ಲೂಕಿನಲ್ಲಿ ಇಂದು ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಪ್ರಚಾರ



ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ್ ಅವರು ಇಂದು ಹೊನ್ನಾಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮತಯಾಚನೆ ಮಾಡಲಿದ್ದಾರೆ. ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ನೇತೃತ್ವದಲ್ಲಿ ಬೆಳಗ್ಗೆ 10ಕ್ಕೆ ಮುಕ್ತೇನಹಳ್ಳಿ, 10.30 ಕ್ಕೆ ಬನ್ನಿಕೋಡು, 11 ಕ್ಕೆ ಕೂಲಂಬಿ, 11.30 ಕಂಬಳೂರು, ಮಧ್ಯಾಹ್ನ 12 ಕ್ಕೆ ಕುಂದೂರು, 12.30 ಎಕ್ಕನಹಳ್ಳಿ, 1 ಕ್ಕೆ ತಿಮ್ಲಾಪುರ, 1.30 ಕ್ಕೆ ತರಗನಹಳ್ಳಿ, 2 ಕ್ಕೆ ಬೆನಕನಹಳ್ಳಿ, 2.30 ಕ್ಕೆ ಬೀರಗೊಂಡನಹಳ್ಳಿ, ಸಂಜೆ 3 ಕ್ಕೆ ರಾಂಪುರ, 3.30 ಕ್ಕೆ ಕುಳಗಟ್ಟೆ, 4 ಕ್ಕೆ ಕ್ಯಾಸಿನಕೆರೆ, 4.30 ಕ್ಕೆ ಹುಣಸಘಟ್ಟ, 5 ಕ್ಕೆ ಲಿಂಗಾಪುರ, 5.30 ಕ್ಕೆ ಹೊಸಹಳ್ಳಿ, 6 ಕ್ಕೆ ಸಾಸ್ವೆಹಳ್ಳಿ, 6.30 ಕಮ್ಮಾರಘಟ್ಟೆ ಗ್ರಾಮಗಳಲ್ಲಿ ಪ್ರಚಾರ ನಡೆಸಲಿದ್ದಾರೆ.

## ರೈತರ ಹಿತ ಕಾಯಲು ಎಸ್ಸೆಸ್ಸೆಂಗೆ ಮನವಿ

(3ನೇ ಪುಟದಿಂದ) ಸಚಿವರು ರೈತರಿಗೆ ತಿಳಿಸಿದರು.

ರೈತ ಸಂಘದ ಹನಗವಾಡಿ ರುದ್ರಮುನಿ, ತಾ. ಅಧ್ಯಕ್ಷ ಹಲಸಬಾಳು ಬಸವರಾಜಪ್ಪ, ಸುರೇಶಪ್ಪ, ರಾಜನಹಳ್ಳಿ ಪರಶುರಾಮ್, ಶಿವನಹಳ್ಳಿ ಹನುಮಂತಪ್ಪ, ಭಾನುವಳ್ಳಿ ಪರಮೇಶ್ವರಪ್ಪ, ಹನಗವಾಡಿ ಸಿದ್ದಪ್ಪ, ಹಾಲಿವಾಣದ ದೊಡ್ಡಪ್ಪ, ರಂಗಪ್ಪ, ಕೆಂಚನಹಳ್ಳಿ ಶೇಖರಪ್ಪ, ನಾರಪ್ಪ, ಬಾತಿ ಈರಪ್ಪ, ಕುಂಬಳೂರು ಆಂಜನೇಯ, ಹರಿಹರದ ಗೋಪಾಲ್ ಪವಾರ್, ಕೊಂಡಜ್ಜಿ ಬಸವರಾಜಪ್ಪ, ಪ್ರಕಾಶಪ್ಪ, ಗೋವಿನಹಾಳ್ ಗದಿಗೆಪ್ಪ, ವಾಸನ ರಂಗಪ್ಪ ಮತ್ತು ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹನಗವಾಡಿ ಕುಮಾರ್, ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಹನಗವಾಡಿ ಸಾರಥಿ ಮಂಜುನಾಥ್, ಹರಿಹರ ನಗರಸಭೆ ಸದಸ್ಯ ಎಬಿಎಂ ವಿಜಯಕುಮಾರ್ ಈ ವೇಳೆ ಹಾಜರಿದ್ದರು.

## ದ್ವಾರಕೀಶ್ ನಿಧನಕ್ಕೆ ಜಿಲ್ಲಾ ಕಸಾಪ ಸಂತಾಪ



ದಾವಣಗೆರೆ, ಏ. 16 - ಚಲನಚಿತ್ರ ರಂಗದಲ್ಲಿ ವಿವಿಧ ಸ್ಥರಗಳಲ್ಲಿ ಅಮೋಘ ಸೇವೆ ಸಲ್ಲಿಸಿ ಅಗಲಿರುವ ಹಿರಿಯ ಚೇತನ ದ್ವಾರಕೀಶ್ ಅವರಿಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಅವರು ಶೋಕ ವ್ಯಕ್ತಪಡಿಸಿದ್ದಾರೆ.

ದ್ವಾರಕೀಶ್ ನಿಧನದಿಂದ ಚಲನಚಿತ್ರ ರಂಗದ ಹಿರಿಯ ಕೊಂಡಿ ಕಳಚಿ ಚಲನಚಿತ್ರರಂಗಕ್ಕೆ ಮತ್ತು ಕಲಾಸಕ್ತರಿಗೆ ತುಂಬಲಾರದ ನಷ್ಟವನ್ನುಂಟು ಮಾಡಿದೆ ಎಂದು ಅವರು ಹೇಳಿದ್ದಾರೆ.

## ಧರ್ಮ, ದೇಶ ಉಳಿಸಲು ಮತ್ತೆ ಮೋದಿ

(3ನೇ ಪುಟದಿಂದ) ಇದೇ ಪರಿಸ್ಥಿತಿ ದೇಶದಲ್ಲೂ ಬರಬಾರದು ಎಂದು ಹೇಳಿದರು.

ಕಾರ್ಯಕ್ರಮದ ವೇದಿಕೆ ಮೇಲೆ ಬಿಜೆಪಿ ಮುಖಂಡರಾದ ಶ್ರೀನಿವಾಸ ದಾಸಕರಿಯಪ್ಪ, ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ್, ಜಿ.ಎಸ್. ಅನಿತ್, ಜಿ.ಎನ್. ರಾಜೀವ್, ಎ.ವೈ. ಪ್ರಕಾಶ್, ಚಂದ್ರಶೇಖರ್ ಪೂಜಾರ್, ಐರಣಿ ಅಣ್ಣೇಶ್, ಅನಿಲ್, ಉಪ ಮೇಯರ್ ಯಶೋಧ ಹೆಗ್ಗಪ್ಪ, ಪಾಲಿಕೆ ವಿಪಕ್ಷ ನಾಯಕ ಪ್ರಸನ್ನ ಕುಮಾರ್, ಪಾಲಿಕೆ ಸದಸ್ಯರಾದ ಎಸ್.ಟಿ. ವೀರೇಶ್, ಶಿವಾನಂದ್, ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

## ನಾಗರಿಕ, ಕೈಗಾರಿಕಾ ಡ್ರೋನ್‌ಗಳಿಗೆ ಪ್ರತ್ಯೇಕ ಮಾರ್ಗಸೂಚಿಗೆ ಪರಿಶೀಲನೆ

ಬೆಂಗಳೂರು, ಏ. 16 – ನಾಗರಿಕ ಹಾಗೂ ಕೈಗಾರಿಕಾ ಬಳಕೆಗೆ ಉಪಯೋಗಿಸುವ ಡ್ರೋನ್‌ಗಳಿಗೆ ಪ್ರತ್ಯೇಕ ಮಾರ್ಗಸೂಚಿ ರೂಪಿಸಲು ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯ ಪರಿಶೀಲಿಸುತ್ತಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಡ್ರೋನ್‌ಗೆ ಸಂಬಂಧಿಸಿದ ಸಮಗ್ರ ವ್ಯವಸ್ಥೆಯನ್ನು ಭಾರತದಲ್ಲೇ ಹೊಂದುವ ಅಗತ್ಯವಿದೆ. ಡ್ರೋನ್ ಬಳಕೆಗೆ ಸರ್ಕಾರ ಉತ್ತೇಜನ ನೀಡಲಿದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯದ ಕಾರ್ಯದರ್ಶಿ ವಮ್ಲುನ್‌ಮಾಂಗ್ ವೌಲ್ನಾಮ್ ಹೇಳಿದ್ದಾರೆ.

ಡ್ರೋನ್ ಹಾಗೂ ಅದರ ಉಪಕರಣಗಳ ಉತ್ಪಾದನೆಗಾಗಿ ಉತ್ತೇಜನ ನೀಡುವ ಯೋಜನೆಯನ್ನು 2021ರ ಸೆಪ್ಟೆಂಬರ್‌ನಲ್ಲಿ ಪ್ರಕಟಿಸಲಾಗಿತ್ತು. ಈ ಯೋಜನೆಗಾಗಿ 120 ಕೋಟಿ ರೂ.ಗಳನ್ನು ಒದಗಿಸಲಾಗಿದೆ ಎಂದೂ ಅವರು ತಿಳಿಸಿದ್ದಾರೆ. ಶೀಘ್ರದಲ್ಲೇ ನಮೋ ಡ್ರೋನ್ ದೀದಿ ಯೋಜನೆಗೆ ಚಾಲನೆ ನೀಡಲಾಗುವುದು. ಈ ಯೋಜನೆಯ ಮೂಲಕ ಗ್ರಾಮೀಣ ಮಹಿಳೆಯರಿಗೆ ಕೃಷಿ ಡ್ರೋನ್‌ಗಳನ್ನು ಒದಗಿಸಲಾಗುವುದು. ಮಹಿಳಾ ಸ್ವಸಹಾಯ ಸಂಘಗಳಿಗೆ 15,000 ಡ್ರೋನ್‌ಗಳನ್ನೂ ಒದಗಿಸಲಾಗುವುದು ಎಂದವರು ಹೇಳಿದ್ದಾರೆ.

# ಜೀವನ ಯಾನ ಮುಗಿಸಿದ 'ಪ್ರಚಂಡ ಕುಳ್ಳ'

(3ನೇ ಪುಟದಿಂದ) ವೇಳೆಗೆ ಎಚ್ಚರಿಸಲು ಹೋದಾಗ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಆ ವೇಳೆಗೆ ಸಾವು ಸಂಭವಿಸಿತ್ತು ಎಂದು ಕುಟುಂಬದವರು ಹೇಳಿದ್ದಾರೆ.

ಡಾ. ರಾಜ್ ಕುಮಾರ್ ಹಾಗೂ ವಿಷ್ಣುವರ್ಧನ್ ಮುಂತಾದ ಹಿರಿಯರ ಜೊತೆ ನಟಿಸಿದ್ದ ದ್ವಾರಕೀಶ್, ಹಾಸ್ಯ ಪಾತ್ರಗಳ ಮೂಲಕ ಜನಮನ ಸೂರೆಗೊಂಡಿದ್ದರು.

ದ್ವಾರಕೀಶ್ 1942 ಆಗಸ್ಟ್ 19ರಂದು ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ ಜನಿಸಿದರು. ಇವರ ತಂದೆ ಶಾಮರಾವ್ ಮತ್ತು ತಾಯಿ ಜಯಮ್ಮ. ಪ್ರಾಥಮಿಕ, ಪ್ರೌಢಶಿಕ್ಷಣದ ನಂತರ ಸಿಪಿಸಿ ಪಾಕಿಟೆಕ್ನಿಕ್ ಕಾಲೇಜಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಅಧ್ಯಯನ ಮಾಡಿದ್ದರು. ನಂತರ ಆಟೋ ಸ್ಪೇರ್ ಸ್ಟೋರ್ ಆರಂಭಿಸಿದರು.

1964ರಲ್ಲಿ ವೀರ ಸಂಕಲ್ಪ ಎಂಬ ಸಿನಿಮಾ ಮೂಲಕ ಕನ್ನಡ ಚಿತ್ರರಂಗಕ್ಕೆ ದ್ವಾರಕೀಶ್ ಪಾದಾ ರ್ಪಣೆ ಮಾಡಿದರು. 1966ರಲ್ಲಿ ಅವರು 'ಮಮತೆ ಯ ಬಂಧನ' ಚಿತ್ರದ ಸಹ ನಿರ್ಮಾಪಕರಾಗಿದ್ದರು. 1969ರಲ್ಲಿ ರಾಜ್‌ಕುಮಾರ್ ಅವರು ಅಭಿನಯಿ ಸಿದ್ದ 'ಮೇಯರ್ ಮುತ್ತಣ್ಣ' ಚಿತ್ರವನ್ನು ನಿರ್ಮಿಸಿದ್ದು, ಅವರಿಗೆ ದೊಡ್ಡ ಯಶಸ್ಸು ತಂದು ಕೊಟ್ಟಿತ್ತು.

ಕುಳ್ಳಗಿರುವುದು ಹಲವರಿಗೆ ಹಿನ್ನಡೆಯಾಗಿರಬಹುದು. ಆದರೆ, ಇದನ್ನೇ ಯಶಸ್ಸಿನ ಮೆಟ್ಟಿಲು ಮಾಡಿಕೊಂಡಿದ್ದ ದ್ವಾರಕೀಶ್, 'ಪ್ರಚಂಡ ಕುಳ್ಳ', 'ಕುಳ್ಳ ಏಜೆಂಟ್ 000', 'ಕೌಬಾಯ್ ಕುಳ್ಳ', 'ಸಿಂಗಾಪುರದಲ್ಲಿ ರಾಜಾ ಕುಳ್ಳ', 'ಕುಳ್ಳ ಕಳ್ಳಿ', ಹಾಗೂ 'ಹೊಸ ಕಳ್ಳ ಹಳೇ ಕುಳ್ಳ' ಮುಂತಾದ ಚಿತ್ರಗಳಲ್ಲಿ ಅವರು ಹೆಸರು ಮಾಡಿದ್ದರು. ಹೀಗಾಗಿ ಅವರನ್ನು 'ಪ್ರಚಂಡ ಕುಳ್ಳ' ಎಂದೇ ಕರೆಯಲಾಗುತ್ತಿತ್ತು.

1985ರಲ್ಲಿ ಅವರು 'ನೀ ಬರೆದ ಕಾದಂಬರಿ' ಚಿತ್ರದ ಮೂಲಕ ನಿರ್ದೇಶನಕ್ಕೆ ಕಾಲಿಟ್ಟರು. ಈ ಚಿತ್ರ ಯಶಸ್ಸನ್ನೂ ಕಂಡಿತ್ತು. ಅವರ ನಿರ್ಮಾಣದ 'ಆಪ್ತಮಿತ್ರ' ಚಿತ್ರ ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಹೆಸರು ತಂದುಕೊಟ್ಟಿತ್ತು.

ದ್ವಾರಕೀಶ್ ನಿಧನಕ್ಕೆ ಸಂತಾಪ ಸೂಚಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಾ. ರಾಜ್‌ಕುಮಾರ್ ಮತ್ತು ಡಾ. ವಿಷ್ಣುವರ್ಧನ್ ಅವರಂತಹ ಮೇರು ನಟರೊಂದಿಗೆ ಪರದೆ ಹಂಚಿಕೊಳ್ಳುತ್ತಿದ್ದರೂ ಹಾಸ್ಯಭರಿತ ನಟನೆಯ ಮೂಲಕ ನೋಡುಗರ ಮನದಲ್ಲಿ ತಮ್ಮದೇ ಆದ ಛಾಪು ಮೂಡಿಸಿದವರು ದ್ವಾರಕೀಶ್. ಅವರ ನಿಧನದಿಂದ ಕನ್ನಡ ಚಿತ್ರರಂಗ ಬಡವಾಗಿದೆ ಎಂದಿದ್ದಾರೆ.

HOSTEL FOR RENT
NEAR BAKKESHWARA CHOULTRY. S.N. LAYOUT
CONTACT
9535114063, 96203 71544
97428 35642

# ಉದ್ಯೋಗಸ್ಥ ಮಹಿಳೆಯರು ಸೇರಿದಂತೆ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಒತ್ತು



## ಮಹಿಳೆಯರೊಂದಿಗೆ ಪ್ರಭಾ ಮಲ್ಲಿಕಾರ್ಜುನ್ ಸಂವಾದ

ದಾವಣಗೆರೆ, ಏ. 16 - ಉದ್ಯೋಗಸ್ಥ ಮಹಿಳೆಯರು ಸೇರಿದಂತೆ ಜಿಲ್ಲೆಯಲ್ಲಿ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ತಿಳಿಸಿದರು.

ನಗರದ ಕೈಗಾರಿಕಾ ಪ್ರದೇಶದಲ್ಲಿನ ವಿವಿಧ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವ ಉದ್ಯೋಗಸ್ಥ ಮಹಿಳೆಯರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಇಂದು ಮಹಿಳೆಯರ ಸಬಲೀಕರಣ ಅವಶ್ಯಕತೆ ಇರುವುದನ್ನು ಮನಗಂಡು ಕಾಂಗ್ರೆಸ್ ಸರ್ಕಾರ ಪ್ರತಿ ಮಹಿಳೆಗೆ ಪ್ರತಿ ತಿಂಗಳು 2 ಸಾವಿರ ರೂ. ನೀಡುತ್ತಿದ್ದು, ಶಕ್ತಿ ಯೋಜನೆ ಮೂಲಕ ಸರ್ಕಾರಿ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಲು ಅನುಕೂಲ ಕಲ್ಪಿಸಿದೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಮಹಿಳಾ ಸಂಘಗಳನ್ನು ಆರಂಭಿಸುವ ಮೂಲಕ ಉಳಿತಾಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದರು.

ಇನ್ನು ಹೆಚ್ಚಿನ ರೀತಿಯಲ್ಲಿ ಮಹಿಳೆಯರು ಸ್ವಾವಲಂಬಿ ಜೀವನ ನಡೆಸಲು ಗಾರ್ಮೆಂಟ್ಸ್ ಮತ್ತು ಕರಕುಶಲ ಕೇಂದ್ರಗಳನ್ನು ಸ್ಥಾಪಿಸುವ ಚಿಂತನೆ ನಡೆಸಲಾಗಿದೆ. ಜೊತೆಗೆ ಮಹಿಳಾ ಉದ್ಯಮಿಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ, ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಭೂಮಿಕಾ ಡಿ.ಸಿ. ಶ್ರೀನಿವಾಸ್, ಸತ್ಯನಾರಾಯಣ, ಕೋಮಲ ಜೈನ್, ಹಾಲೇಶ್ ಗೌಡ, ಶಾಕೀರ ಗಾರ್ಮೆಂಟ್ಸ್‌ನ ಆರೀಫ್, ಎಸ್.ಬಿ.ಎಲ್ ಗಾರ್ಮೆಂಟ್ಸ್‌ನ ವಿಶ್ವನಾಥ, ಶ್ರೀನಿವಾಸ್, ಮಯೂರ ಗಾರ್ಮೆಂಟ್ಸ್‌ನ ಕಿಶನ್, ಮಹಾಂತ ಮೋಟಾರ್ಸ್‌ನ ಪ್ರಕಾಶ್, ಪ್ರಶಾಂತ್, ಸಾಯಿ ಕ್ರಿಯೇಷನ್‌ನ ಮುರುಗೇಶಪ್ಪ ಮತ್ತಿತರರಿದ್ದರು.

## ಕೊಡಗನೂರಿನಲ್ಲಿ ಇಂದು ಆಂಜನೇಯ ಸ್ವಾಮಿ ತೇರು



ದಾವಣಗೆರೆ ತಾಲ್ಲೂಕಿನ ಕೊಡಗನೂರಿನಲ್ಲಿ ಪ್ರಸಿದ್ಧ ಶ್ರೀ ಆಂಜನೇಯ ಸ್ವಾಮಿ ರಥೋತ್ಸವವು ಇಂದು ಬೆಳಿಗ್ಗೆ 9 ಗಂಟೆಗೆ ನಡೆಯಲಿದೆ.

# ಪ್ರಧಾನಿ ಮೋದಿಯಂತಹ ಶಕ್ತಿಯನ್ನು ಎದುರಿಸಲು ವಿಪಕ್ಷದವರಿಂದ ಸಾಧ್ಯವಿಲ್ಲ



## ಹರಪನಹಳ್ಳಿಯಲ್ಲಿ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ

ಹರಪನಹಳ್ಳಿ, ಏ. 16- ಪ್ರಧಾನಿ ನರೇಂದ್ರ ಮೋದಿಯವರು ದೇಶಕ್ಕೆ ದೊಡ್ಡ ಶಕ್ತಿ. ಈ ಶಕ್ತಿಯನ್ನು ಎದುರಿಸಲು ವಿಪಕ್ಷದವರಿಂದ ಸಾಧ್ಯವಿಲ್ಲ ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಹೇಳಿದರು.

ತಾಲ್ಲೂಕಿನ ಕೆ. ಕಲ್ಲಹಳ್ಳಿ ಗ್ರಾಮದಲ್ಲಿ ಮಂಗಳವಾರ ಚುನಾವಣಾ ಪ್ರಚಾರದಲ್ಲಿ ಮಾತನಾಡಿದ ಅವರು, ನೀವು ಬಿಜೆಪಿಗೆ ಹಾಕುವ ಒಂದೊಂದು ಮತ ದೇಶದ ರಕ್ಷಣೆ, ಭದ್ರತೆ, ಶಿಕ್ಷಣ, ಮಹಿಳೆಯರ ಸಬಲೀಕರಣಕ್ಕೆ ಕಾರಣವಾಗಲಿದೆ ಎಂದರು.

ಕಾಂಗ್ರೆಸ್ 60 ವರ್ಷ ಅಧಿಕಾರ ನಡೆಸಿದರೂ ಯಾವುದೇ ಅಭಿವೃದ್ಧಿ ಕೆಲಸ ಮಾಡಲಿಲ್ಲ. ಆದರೆ ನರೇಂದ್ರ ಮೋದಿಯವರು ಕೇವಲ 10 ವರ್ಷಗಳಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿ ತೋರಿಸಿದ್ದಾರೆ. ಇನ್ನೂ ಹೆಚ್ಚು ಅಭಿವೃದ್ಧಿ ಆಗಲು ಬಿಜೆಪಿಗೆ ಮತ ನೀಡಿ ಎಂದು ಕೋರಿದರು.

ಮಾಜಿ ಶಾಸಕ ಜಿ. ಕರುಣಾಕರ ರೆಡ್ಡಿ ಮಾತನಾಡಿ, ಬಿಜೆಪಿ ಅಧಿಕಾರಕ್ಕೆ ಬಂದರೆ ಮಾತ್ರ ದೇಶ ಅಭಿವೃದ್ಧಿ ಆಗಲು ಸಾಧ್ಯ. ಆದ್ದರಿಂದ ನೀವೆಲ್ಲರೂ ಮತ್ತೊಮ್ಮೆ ಬಿಜೆಪಿಗೆ ಮತ ಹಾಕುವ ಮೂಲಕ ನರೇಂದ್ರ ಮೋದಿಯವರ ಕೈ ಬಲಪಡಿಸಬೇಕು ಎಂದು ಹೇಳಿದರು.

ನಾನು ಕಳೆದ 21 ವರ್ಷಗಳಿಂದ ಬಿಜೆಪಿಯಲ್ಲಿ ಸಕ್ರಿಯವಾಗಿ ತೊಡಗಿಕೊಂಡು ಶಾಸಕನಾಗಿ, ಸಚಿವನಾಗಿ ತಾಲ್ಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ. ಸೋಲು-ಗೆಲುವಿನಲ್ಲಿ ನಿಮ್ಮ ಜೊತೆಗಿದ್ದೇನೆ ಎಂದು ತಿಳಿಸಿದರು.

ನಂತರ ಕೂಲಹಳ್ಳಿ, ಮಾಡ್ಲಿಗೇರಿ, ತೊಗರಿಕಟ್ಟೆ, ಕುಂಚೂರು, ಕೆ. ಕಲ್ಲಹಳ್ಳಿ, ನಿಟ್ಟೂರು, ಹಲುವಾಗಲು, ಕಡತಿ ಸೇರಿ ವಿವಿಧ ಗ್ರಾಮಗಳಲ್ಲಿ ಮತಯಾಚನೆ ನಡೆಸಿದರು.

ಈ ಸಂದರ್ಭದಲ್ಲಿ ಆರ್. ಲೋಕೇಶ್, ಮಂಜುನಾಥ ಆರ್.ನಾಯ್ಕ, ಯಡಿಹಳ್ಳಿ ಶೇಖರಪ್ಪ, ಎಂ. ಮಲ್ಲೇಶ್, ತಿಮ್ಮೇಶ, ಪುರಸಭೆ ಮಾಜಿ ಸದಸ್ಯೆ ವಿಜಯಲಕ್ಷ್ಮಿ, ಕಲ್ಲಹಳ್ಳಿ ಪರಸಪ್ಪ, ಹನುಮಂತಪ್ಪ, ಮೌನೇಶ, ಮಜ್ಜಿಗೇರಿ ನಿಂಗಪ್ಪ, ಅಜ್ಜಪ್ಪ, ದಿಳ್ಯೆಪ್ಪ, ಭೀಮಪ್ಪ, ಬಸವರಾಜನಾಯ್ಕ, ಹಂಪಾಪುರ ಬೀರಪ್ಪ, ಕೊಟ್ರೇಶ ನಾಯ್ಕ, ಬೇವಿನಹಳ್ಳಿ ಬಸವರಾಜ, ಮಲ್ಲಿಕಾರ್ಜುನ, ಇಟ್ಟಿಗುಡಿ ವಾಮಪ್ಪ, ರೂಪ್ಲಾನಾಯ್ಕ, ನಾಗರಾಜ ಪಾಟೀಲ್, ಸಿದ್ದೇಶ ರೆಡ್ಡಿ, ಸೂರ್ಯನಾಯ್ಕ, ಹಾಲಮ್ಮ, ಸುವರ್ಣಮ್ಮ, ಜಿ.ಎಂ. ರೇಖಾ, ಹನುಮಂತ, ಕೊಟ್ರೇಶ, ರಾಜಪ್ಪ, ಶೀಲ್ಯಾನಾಯ್ಕ ಸೇರಿದಂತೆ, ಇತರರು ಇದ್ದರು.

# ವರ್ಲ್ಡ್ ಅಥ್ಲೆಟಿಕ್ ಚಾಂಪಿಯನ್ ಶಿಪ್‌ಗೆ ಭೂಲಕ್ಷ್ಮಿ ಆಯ್ಕೆ



ದಾವಣಗೆರೆ, ಏ.16- ನೇಪಾಳದಲ್ಲಿ ಕಳೆದ ವಾರ ನಡೆದ ಅಥ್ಲೆಟಿಕ್ ಕ್ರೀಡೆಗಳಲ್ಲಿ ನಗರದ ಭೂಲಕ್ಷ್ಮಿ ಅವರು 5 ಚಾಂಪಿಯನ್ ಶಿಪ್ ಪಡೆದು ಗುಟೆನ್‌ಬರ್ಗ್ ದೇಶದಲ್ಲಿ ನಡೆಯುವ ವರ್ಲ್ಡ್ ಅಥ್ಲೆಟಿಕ್ ಚಾಂಪಿಯನ್ ಶಿಪ್‌ಗೆ ಆಯ್ಕೆಯಗಿದ್ದಾರೆ.

ಹರಿಹರದ ನ್ಯಾಯಾಲಯದಲ್ಲಿ ಆದೇಶ ಜಾರಿಕಾರರಾಗಿ ಸೇವೆ ಸಲ್ಲಿಸುತ್ತಿರುವ ಭೂಲಕ್ಷ್ಮಿ ಅವರು, 100 ಮತ್ತು 200 ಮೀಟರ್ ಓಟ, ಚಕ್ರ ಎಸೆತ, ಪವರ್ ಲಿಫ್ಟಿಂಗ್ ಮತ್ತು 55 ಕೆ.ಜಿ ವಿಭಾಗದ ಕುಸ್ತಿಯಲ್ಲಿ ಪ್ರಥಮ ಸ್ಥಾನ ಪಡೆದು ದೇಶಕ್ಕೆ ಕೀರ್ತಿ ತಂದಿದ್ದಾರೆ.

ಇವರ ಸಾಧನೆಯನ್ನು ಶ್ಲಾಘಿಸಿದ ಜಿಲ್ಲಾ ಸತ್ರ ನ್ಯಾಯಾಲಯದ ನ್ಯಾಯಾಧೀಶರು ಮತ್ತು ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ವೀರೇಶ್ ಎಸ್. ವಡೇನಪುರ ಹರ್ಷ ವ್ಯಕ್ತಪಡಿಸಿದ್ದಾರೆ.

# ಬಿಸಿಲಿನ ತಾಪ ಹೆಚ್ಚಳ, ಸರ್ಕಾರಿ ಕಟ್ಟಡಗಳ ಮೇಲೆ ನೀರು ಶೇಖರಣೆಗೆ ಆದೇಶ



ದಾವಣಗೆರೆ, ಏ. 16 - ಬರ, ಬಿಸಿಲಿನ ತಾಪ ಹೆಚ್ಚಳ, ಮತ್ತೊಂದೆಡೆ ನೀರಿನ ಅಭಾವ, ಇದರಿಂದ ಜನ, ಜಾನುವಾರುಗಳ ಜೊತೆಗೆ ಪ್ರಾಣಿ, ಪಕ್ಷಿಗಳಿಗೂ ಜೀವ ಜಲದ ಅಭಾವ ಕಾಡುತ್ತಿದೆ. ಪಕ್ಷಿಗಳಿಗೂ ಜೀವ ಜಲ ನೀಡಲು ಎಲ್ಲಾ ಸರ್ಕಾರಿ ಕಟ್ಟಡಗಳ ಮೇಲೆ ಮಣ್ಣಿನಿಂದ ಮಾಡಿದ ಮಡಿಕೆ, ಪಾತ್ರೆಗಳಲ್ಲಿ ನೀರು ಶೇಖರಣೆ ಮಾಡಿಡಲು ಮತ್ತು ನೀರು ಕಡಿಮೆಯಾಗದಂತೆ ದಿನನಿತ್ಯ ನೀರು ಹಾಕುವಂತೆ ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಎಲ್ಲಾ ಇಲಾಖೆ ಅಧಿಕಾರಿಗಳಿಗೆ ಆದೇಶಿಸಿದ್ದಾರೆ.


# ಕೆ. ಹನೀಫ್‌ಸಾಬ್, ಜಿಲ್ಲಾ ಕಾಂಗ್ರೆಸ್ ಕಾನೂನು ವಿಭಾಗದ ಪ್ರಧಾನ ಕಾರ್ಯದರ್ಶಿ



ದಾವಣಗೆರೆ, ಏ. 16 - ನಗರದ ವಕೀಲ ಕೆ. ಹನೀಫ್‌ಸಾಬ್ ಅವರನ್ನು ಜಿಲ್ಲಾ ಕಾಂಗ್ರೆಸ್ ಕಾನೂನು ವಿಭಾಗದ ದಾವಣಗೆರೆ ಜಿಲ್ಲಾ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಕಾನೂನು ವಿಭಾಗದ ಅಧ್ಯಕ್ಷ ಪ್ರಕಾಶ್ ಪಾಟೀಲ್ ತಿಳಿಸಿದ್ದಾರೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕಾನೂನು ವಿಭಾಗದ ರಾಜ್ಯಾಧ್ಯಕ್ಷ ಎ.ಎಸ್. ಪೊನ್ನಣ್ಣ ಅವರ ಆದೇಶ ಮತ್ತು ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್ ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಅವರುಗಳ ಶಿಫಾರಸ್ಸಿನ ಮೇರೆಗೆ ಈ ನೇಮಕ ಮಾಡಲಾಗಿದೆ.

# ಕ್ಷಮಾ ಯಾಚನೆಗೆ ಮುಂದಾದ ರಾಮದೇವ್



ನವದೆಹಲಿ, ಏ. 16 – ಅಲೋಪತಿ ವೈದ್ಯಕೀಯ ಪದ್ಧತಿಯನ್ನು ಜರಿಯದಂತೆ ಯೋಗ ಗುರು ಬಾಬಾ ರಾಮದೇವ್ ಹಾಗೂ ಪತಂಜಲಿ ಆಯುರ್ವೇದದ ಬಾಲಕೃಷ್ಣಗೆ ಎಚ್ಚರಿಕೆ ನೀಡಿರುವ ಸುಪ್ರೀಂ ಕೋರ್ಟ್, ವಾರದಲ್ಲೇ ಸಾರ್ವಜನಿಕ ಕ್ಷಮಾ ಯಾಚನೆಗೆ ಅನುಮತಿ ನೀಡಿದೆ.

ಸುಪ್ರೀಂ ಕೋರ್ಟ್‌ಗೆ ನೀಡಿದ ಮುಚ್ಚಳಿಕೆ ಉಲ್ಲಂಘಿಸಿ ತಪ್ಪು ದಾರಿಗೆಳೆಯುವ ಜಾಹೀರಾತು ನೀಡಿದ ಹಿನ್ನೆಲೆಯಲ್ಲಿ ಕ್ರಮ ತೆಗೆದುಕೊಳ್ಳುತ್ತಿರುವ ಸುಪ್ರೀಂ ಕೋರ್ಟ್, ಕ್ಷಮೆ ಕೇಳಿದರೂ ಪ್ರಕರಣದಿಂದ ಇನ್ನೂ ಕೈ ಬಿಟ್ಟಿಲ್ಲ ಎಂದು ತಿಳಿಸಿದೆ.

ಕೊರೊನಾ ಲಸಿಕೆ ಹಾಗೂ ಆಧುನಿಕ ವೈದ್ಯಕೀಯ ಪದ್ಧತಿಯ ವಿರುದ್ಧ ರಾಮದೇವ್ ಅಪಪ್ರಚಾರ ಮಾಡುತ್ತಿದ್ದಾರೆ ಎಂದು 2022ರಲ್ಲಿ ಐ.ಎಂ.ಎ. ಅರ್ಜಿ ದಾಖಲಿಸಿತ್ತು.


ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಹಾಗೂ ಅಹಸಾನುದ್ದೀನ್ ಅಮಾನುಲ್ಲಾ ಅವರನ್ನು ಒಳಗೊಂಡ ಪೀಠದ ಎದುರು ವಕೀಲರೊಂದಿಗೆ ಖುದ್ದು ಹಾಜರಾದ ರಾಮದೇವ್ ಹಾಗೂ ಬಾಲಕೃಷ್ಣ, ಸಾರ್ವಜನಿಕವಾಗಿ ಬೇಷರತ್ ಕ್ಷಮೆ ಯಾಚಿಸುವ ಮೂಲಕ ಪಶ್ಚಾತ್ತಾಪ ವ್ಯಕ್ತಪಡಿಸುವುದಾಗಿ ಹೇಳಿದರು.

ರಾಮದೇವ್ ಹಾಗೂ ಬಾಲಕೃಷ್ಣ ಸ್ವಯಂ ಪ್ರೇರಿತವಾಗಿ ಈ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದರು. ನ್ಯಾಯಾಲಯ ಮುಂದಿನ ವಿಚಾರಣೆಯನ್ನು ಏಪ್ರಿಲ್ 23ಕ್ಕೆ ನಿಗದಿ ಪಡಿಸಿದೆ.

ನ್ಯಾಯಾಲಯದ ಎದುರು ಕೈ ಮುಗಿದ ರಾಮದೇವ್, ನಾನು ಏನೇ ತಪ್ಪು ಮಾಡಿದ್ದರೂ, ಅದಕ್ಕೆ ಬೇಷರತ್ತಾಗಿ ಕ್ಷಮೆ ಯಾಚಿಸುತ್ತೇನೆ ಎಂದು ಹೇಳಿದರು. ಬಾಲಕೃಷ್ಣ ಸಹ ಕ್ಷಮೆ ಯಾಚಿಸಿದರು.

ನ್ಯಾಯಾಲಯದ ಆದೇಶದ ಹೊರತಾಗಿಯೂ ಅಲೋಪತಿ ವೈದ್ಯಕೀಯ ಪದ್ಧತಿಯ ಅವಹೇಳನ ಮಾಡಲಾಗಿದೆ. ನೀವು ನ್ಯಾಯಾಲಯದಲ್ಲಿ ಏನು ನಡೆದಿದೆ ಎಂದು ತಿಳಿಯದೇ ಇರುವಷ್ಟು ಅಮಾಯಕರಲ್ಲ ಎಂದು ಪೀಠ ತಿಳಿಸಿತು.

# ಗೊಲ್ಲರಹಳ್ಳಿಯಲ್ಲಿ ಇಂದು ಲಕ್ಷ್ಮಿ ವೆಂಕಟೇಶ್ವರ ಬ್ರಹ್ಮರಥೋತ್ಸವ



ದಾವಣಗೆರೆ ತಾಲ್ಲೂಕಿನ ಗೊಲ್ಲರಹಳ್ಳಿ ಗ್ರಾಮದಲ್ಲಿ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವೆಂಕಟೇಶ್ವರ ಸ್ವಾಮಿಯ ಬ್ರಹ್ಮರಥೋತ್ಸವ ಇಂದು ಸಂಜೆ 4ಕ್ಕೆ ಜರುಗಲಿದೆ. ಇಂದು ಬೆಳಿಗ್ಗೆ 11.15ಕ್ಕೆ ರಥಕ್ಕೆ ಕಳಸ ಪ್ರತಿಷ್ಠಾಪನೆ, ರಥಕ್ಕೆ ಅರಿಶಿನ ಸೇವೆ ಹಾಗೂ ಕುಂಕುಮ ಪೂಜೆ ನಡೆಯಲಿವೆ. ಬೆಳಿಗ್ಗೆ 11.45 ಕ್ಕೆ ತಿರುಪತಿ ಮಾದರಿಯಲ್ಲಿ ಅನ್ನ ಸಂತರ್ಪಣೆ, ಸಂಜೆ 4ಕ್ಕೆ ಸ್ವಾಮಿ ರಥೋತ್ಸವ ನಡೆಯಲಿದೆ. ನಾಳೆ ಗುರುವಾರ ಬೆಳಿಗ್ಗೆ ಓಕುಳಿ ಕಾರ್ಯಕ್ರಮ, ಬನ್ನಿ ಪೂಜೆ ನಡೆಯಲಿದೆ.

# ನಾಗರಸನಹಳ್ಳಿಯಲ್ಲಿ ನಾಳೆ ಶ್ರೀ ವೀರಭದ್ರೇಶ್ವರಸ್ವಾಮಿ ಜಾತ್ರೆ



ದಾವಣಗೆರೆ ತಾಲ್ಲೂಕಿನ ನಾಗರಸನಹಳ್ಳಿಯ ಶ್ರೀ ವೀರಭದ್ರೇಶ್ವರಸ್ವಾಮಿ ಜಾತ್ರಾ ಮಹೋತ್ಸವದ ಪ್ರಯುಕ್ತ ಇಂದು ಬೆಳಿಗ್ಗೆ 10.30 ರಿಂದ 12 ರವರೆಗೆ ಗುಗ್ಗಳ, ಉಚ್ಛಾಯ, ಕೆಂಡದಾರ್ಚನೆ, ನಾಳೆ ಗುರುವಾರ ಸಂಜೆ 4 ಗಂಟೆಯಿಂದ ಶ್ರೀ ವೀರಭದ್ರೇಶ್ವರ ಸ್ವಾಮಿಯ ಮಹಾರಥೋತ್ಸವ ಜರುಗಲಿದೆ.

## ಶಾಮನೂರಿನಲ್ಲಿ ಇಂದು ರಾಮನವಮಿ

ದಾವಣಗೆರೆ - ಶಾಮನೂರಿನ ಶ್ರೀರಾಮ ಮಂದಿರದಲ್ಲಿ ರಾಮನವಮಿ ಪ್ರಯುಕ್ತ ಇಂದು ವಿಶೇಷ ಪೂಜೆ ನಡೆಯಲಿದೆ.

# ಸಲ್ಮಾನ್ ಖಾನ್ ಹತ್ಯೆಗಾಗಿ ಗುಂಡು ಹಾರಿಸಲಾಗಿತ್ತು

ಮುಂಬೈ, ಏ. 16 – ಬಾಲಿವುಡ್ ನಟ ಸಲ್ಮಾನ್ ಖಾನ್ ಮನೆ ಎದುರು ಗುಂಡು ಹಾರಿಸಿದ್ದ ಇಬ್ಬರು ಬಂಧಿತರು, ಹತ್ಯೆ ಯತ್ನ ನಡೆಸಿದ್ದರು ಎಂದು ಮುಂಬೈ ಪೊಲೀಸರ ಅಪರಾಧ ದಳ ಸ್ಥಳೀಯ ನ್ಯಾಯಾಲಯದ ಎದುರು ತಿಳಿಸಿದೆ.

ಆರೋಪಿಗಳಾದ ವಿಕಿ ಗುಪ್ತ ಹಾಗೂ ಸಾಗರ್ ಪಾಲ್ ಅವರು ಬಿಹಾರದ ನಿವಾಸಿಗಳು. ಅವರು ಬಾಂದ್ರಾದಲ್ಲಿರುವ ಖಾನ್ ಮನೆ ಎದುರು ಭಾನುವಾರ ಬೆಳಿಗ್ಗೆ ಗುಂಡು ಹಾರಿಸಿದ್ದರು. ಸೋಮವಾರ ರಾತ್ರಿ ಅವರನ್ನು ಗುಜರಾತ್‌ನಲ್ಲಿ ಬಂಧಿಸಲಾಗಿತ್ತು. ನಟ ಸಲ್ಮಾನ್ ಖಾನ್ ಮನೆ ಎದುರು ಗುಪ್ತ ಬೈಕ್ ಚಲಾಯಿಸಿದ್ದರೆ, ಹಿಂದೆ ಕುಳಿತಿದ್ದ ಪಾಲ್ ಗುಂಡು ಹಾರಿಸಿದ್ದ ಎಂದು ಪೊಲೀಸರು ಹೇಳಿದ್ದಾರೆ. ನ್ಯಾಯಾಲಯ ಉಭಯರನ್ನು ಏಪ್ರಿಲ್ 25ರವರೆಗೆ ಕಸ್ಟಡಿಗೆ ವಹಿಸಿದೆ.

# ಎಂ. ಮಹೇಶ್ವರಯ್ಯಗೆ 'ಬೆಸ್ಟ್ ಸ್ಮಾರ್ಟ್ ರೆಫರೀ ಆಫ್ ಇಂಡಿಯಾ ರನ್ನರ್ ಟ್ರೋಫಿ'



ದಾವಣಗೆರೆ, ಏ. 16 - ನಗರದ ಅಂತರರಾಷ್ಟ್ರೀಯ ಕ್ರೀಡಾಪಟು ಎಂ. ಮಹೇಶ್ವರಯ್ಯ 'ಬೆಸ್ಟ್ ಸ್ಮಾರ್ಟ್ ರೆಫರೀ ಆಫ್ ಇಂಡಿಯಾ ರನ್ನರ್, ಟ್ರೋಫಿ'ಗೆ ಭಾಜನರಾಗಿದ್ದಾರೆ. ತೆಲಂಗಾಣ ರಾಜ್ಯದ ಹೈದರಾಬಾದ್‌ನ ಲಾಲ್ ಬಹದ್ದೂರ್ ಶಾಸ್ತ್ರೀ ಕ್ರೀಡಾಂಗಣದಲ್ಲಿ ಕಳೆದ ವಾರ ನಡೆದ ರಾಷ್ಟ್ರಮಟ್ಟದ ಪುರುಷರ ಹಾಗು ಮಹಿಳೆಯರ ನ್ಯಾಷನಲ್ ಸೀನಿಯರ್ ಕ್ಲಾಸಿಕ್ ಪವರ್ ಲಿಫ್ಟಿಂಗ್ ಚಾಂಪಿಯನ್ ಶಿಪ್ -2024 ಸ್ಪರ್ಧೆಯ ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದ ಮಹೇಶ್ವರಯ್ಯ ಅವರು 'ಬೆಸ್ಟ್ ಸ್ಮಾರ್ಟ್ ರೆಫರೀ ಆಫ್ ಇಂಡಿಯಾ ರನ್ನರ್' ಟ್ರೋಫಿಗೆ ಭಾಜನರಾಗಿದ್ದಾರೆ. ಹರಿಹರ ತಾಲ್ಲೂಕಿನ ಗಂಗನರಸಿ ಗ್ರಾಮದವರಾದ ಮಹೇಶ್ವರಯ್ಯ, ಪವರ್ ಲಿಫ್ಟಿಂಗ್‌ನಲ್ಲಿ ಜೀವಮಾನದ ಪ್ರಶಸ್ತಿ ಪುರಸ್ಕೃತರು, ಸ್ಟ್ರಾಂಗ್ ಮ್ಯಾನ್ ಆಫ್ ಏಷ್ಯಾ ಪ್ರಶಸ್ತಿ ಪುರಸ್ಕೃತರು ಹಾಗು ಕೆಟಗರಿ ನಂಬರ್ 1 ತೀರ್ಪುಗಾರರಾಗಿದ್ದಾರೆ.

# ಸಂಸದೆ ಹೇಮಾಮಾಲಿನಿಗೆ ಅವಹೇಳನ

## ಸುರ್ಜೇವಾಲಾಗೆ ನಿರ್ಬಂಧ

ನವದೆಹಲಿ, ಏ. 16 – ಬಿಜೆಪಿ ಸಂಸದೆ ಹೇಮಾ ಮಾಲಿನಿ ಅವರ ಬಗ್ಗೆ ಅವಹೇಳನಕಾರಿ ಮಾತುಗಳನ್ನಾಡಿದ ಕಾಂಗ್ರೆಸ್ ನಾಯಕ ರಣದೀಪ್ ಸುರ್ಜೇವಾಲಾ 48 ಗಂಟೆಗಳ ಕಾಲ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳದಂತೆ ಚುನಾವಣಾ ಆಯೋಗ ನಿರ್ಬಂಧಿಸಿದೆ. ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ಪ್ರಚಾರದ ಮೇಲೆ ನಿರ್ಬಂಧನೆಯ ಶಿಕ್ಷೆಗೆ ಗುರಿಯಾಗಿರುವ ಮೊದಲಿಗ ಸುರ್ಜೇವಾಲಾ ಆಗಿದ್ದಾರೆ.

ಹೇಮಾ ಮಾಲಿನಿ ಅವರ ಕುರಿತು ಅಗೌರವದ, ಅನಾಗರಿಕ ಹಾಗೂ ಅಸಭ್ಯ ಮಾತುಗಳನ್ನು ಆಡಿದ ಕಾರಣಕ್ಕಾಗಿ ಚುನಾವಣಾ ಆಯೋಗ ಈ ಹಿಂದೆ ನೋಟಿಸ್ ಕಳಿಸಿತ್ತು. ಇದಕ್ಕೆ ಉತ್ತರಿಸಿದ್ದ ಸುರ್ಜೇವಾಲಾ, ಬಿಜೆಪಿ ವಿಡಿಯೋ ತಿರುಚಿದೆ ಎಂದಿದ್ದರು. ಈ ವಾದ ತಳ್ಳಿ ಹಾಕಿದ್ದ ಚುನಾ ವಣಾ ಆಯೋಗ, ಮಾರ್ಚ್ 31ರ ಘರಲ್ ಹಳ್ಳಿಯಲ್ಲಿ ಸುರ್ಜೇವಾಲಾ ಹೇಳಿಕೆ ನೀಡಿದಾಗ ಇಡೀ ಭಾಷಣವನ್ನು ವಿಡಿಯೋ ಸರ್ವೈಲೆನ್ಸ್ ತಂಡ ಚಿತ್ರೀಕರಿಸಿತ್ತು ಎಂದು ಹೇಳಿದೆ.


**VISION INTERNATIONAL SCHOOL**
**KARUR DAVANAGERE**

**Walk in Interview**

Invites Application for the following Posts of English Medium School

| Qualification | Subject | Medium | Post |
|---|---|---|---|
| B.Sc/B.Ed | Maths & Science | English | 2+3 |
| BA/B.Ed | English | English | 02 |
| BA/B.Ed | Social Science | English | 01 |
| BA/B.Ed | Kannada | Kannada | 03 |
| BA/B.PEd | Physical Education M-01, F-01 | English | 02 |
| BA/B.Ed | Hindi | Hindi | 02 |

3 Yrs Experience Compulsory. Send your Resume to mohammedsajjad4u@gmail.com

Walk in Interview on 24th & 25th April 2024 Time: 10.30 AM

Venue: VISION INTERNATIONAL SCHOOL
Near D.C. Office, Karur Industrial Area, Davanagere

M: 9986-111-560, 99643-27490.



**Ground Floor For Rent**



AVAILABLE FOR RENT
SUITABLE FOR OFFICE/CLINIC/BANK SIZE 45X55 FT.
(Once the Agreement is finalized, Building face lift will be done in this Pattern)

- 3 Rooms+1 Big Hall with 4 Air Conditioners.
- 1 Big Hall with without Air Conditioner.
- 1 Italian Kitchen and outside one Bathroom.
- Only Corporation Water Supply with Overhead Tank.
- Single Car Parking with Collapsible Gate.

7th Cross, 9th Main, P.J.Extension, Near Mruthunjaya Hospital, Davanagere.
Contact: 98804 66799, 99860 35969.



**ಇಸ್ಕಾನ್ ವತಿಯಿಂದ ಚಾರ್‌ಧಾಮ ಯಾತ್ರೆ**



ಯಾತ್ರೆಯ ಅವಧಿ : ರವಿವಾರ, 8ನೇ ಸೆಪ್ಟೆಂಬರ್‌ರಿಂದ ಸೋಮವಾರ, 23ನೇ ಸೆಪ್ಟೆಂಬರ್‌ವರೆಗೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 94212 24448

**ISKCON,**
7th Main, MCC A Block, Near Reddy Building, Davangere.



Srishyla Education Trust ®
**G.M. INSTITUTE OF TECHNOLOGY**
GMIT Campus, P.B.Road, Davanagere.

**ಬೇಕಾಗಿದ್ದಾರೆ**

ಈ ಕೆಳಕಂಡ ಹುದ್ದೆಗಳಿಗೆ ನುರಿತ, ಸೂಕ್ತ ತರಬೇತಿ ಹೊಂದಿದ ಅನುಭವಿ ಅಭ್ಯರ್ಥಿಗಳು ಬೇಕಾಗಿದ್ದಾರೆ.

| | |
|---|---|
| Civil Engineer | B.E/ Dip in Civil Min 5+ years of experience |
| Maintenance Supervisor | B.E/ Dip in Electrical Min 5+ years of experience |
| Guest House Manager | Any Degree Min 3 year Experience in Hotel Management |
| Lab Instructor | Dip in CS/EC/CIVIL/ELECTRICAL |
| Front Office Executive | Any Degree with Excellent in Communication Skill |
| ಎಲೆಕ್ಟ್ರಿಷಿಯನ್ | ಕನಿಷ್ಠ 2–3 ವರ್ಷಗಳ ಅನುಭವ ಇರುವ ಡಿಪ್ಲೋಮೊ ಅಥವಾ ಐಟಿಐ ಎಲೆಕ್ಟ್ರೀಕಲ್ ಸೈನ್ಸ್ ಅಭ್ಯರ್ಥಿಗಳು ಬೇಕಾಗಿದ್ದಾರೆ |
| ಪ್ಲಂಬರ್ | ಕನಿಷ್ಠ 3 ವರ್ಷಗಳ ಅನುಭವ ಇರುವ ಪ್ಲಂಬರ್‌ಗಳು ಬೇಕಾಗಿದ್ದಾರೆ |
| ಕಾರ್‌ಪೆಂಟರ್ | ಕನಿಷ್ಠ 3 ವರ್ಷಗಳ ಅನುಭವ ಇರುವ ಕಾರ್‌ಪೆಂಟರ್ ಬೇಕಾಗಿದ್ದಾರೆ |
| ಡ್ರೈವರ್‌ಗಳು Car/Bus Drivers | ಕನಿಷ್ಠ 5 ವರ್ಷಗಳ ಅನುಭವ ಇರುವ (LMV & HMV) ಲೈಸೆನ್ಸ್ ಹೊಂದಿರುವವರು ಬೇಕಾಗಿದ್ದಾರೆ |
| ಅಟೆಂಡರ್ (Office Boy) | SSLC/PUC |

Note: Age Limit not more than 40 Years
Send your Resume to career@gmit.ac.in

More Details Contact
M: 70223 00263, 84948 04444


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas